೪೧೩

ಪಂಪ ಪ್ರತಿಪಾದಿಸಿದ ಬದುಕಿನ ಮೌಲ್ಯಗಳು

ಪ್ರೊ. ಎಸ್. ಬಿ. ಅಳಗಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜೂನ, ೧೯೬೩

ಉಪನ್ಯಾಸ ಗ್ರಂಥ ಮಾಲೆ

೪೧೩

ಪಂಪ ಪ್ರತಿಪಾದಿಸಿದ ಬದುಕಿನ ಮೌಲ್ಯಗಳು

ಪ್ರೊ. ಎಸ್. ಬಿ. ಅಳಗಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜೂನ, ೧೯೯೩

ಪ್ರಕಾಶಕರು :

ಡಾ. ಸಿ. ಆರ್. ಯರವಿನತೆಲಿಮಠ
ಕಾರ್ಯನಿರ್ವಾಹಕ ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಜೂನ, ೧೯೭೩

ಬೆಲೆ : ರೂ. ೧-೦೦

ಮುದ್ರಕರು :

ಶ್ರೀ ಜೆ. ಎ. ಪೆರೇರಾ
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೧೨ ಪುಸ್ತಿಕೆಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿ ಯಲ್ಲಿ ಪಾಲ್ಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಾ. ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ವೀರೇಶನಗರದಲ್ಲಿ ೩೬೭ನೇ ಉಪನ್ಯಾಸಶಿಬಿರವನ್ನು ದಿ. ೨೨-೨-೧೯೮೭ ರಂದು ಏರ್ಪಡಿಸಲಾಗಿತ್ತು. ಅದರಲ್ಲಿ 'ಪಂಪ ಪ್ರತಿಪಾದಿಸಿದ ಬದುಕಿನ ಮೌಲ್ಯಗಳು' ಎಂಬ ವಿಷಯ ಕುರಿತು ಮಾಡಿದ ಉಪನ್ಯಾಸದ ಪುಸ್ತಕ ರೂಪವಿದು. ಪಂಪನ ಕುರಿತು ಈಗಾಗಲೇ ಸಾಕಷ್ಟು ಸಾಹಿತ್ಯ ರಚನೆಗೊಂಡಿದೆ. ಆ ದಿಶೆಯಲ್ಲಿ ನನ್ನದೂ ಒಂದು ಪುಟ್ಟ ಪ್ರಯತ್ನ. ಕಾಲಗತಿಸಿದಂತೆ ಶತಮಾನಗಳುರುಳಿದಂತೆ ಪ್ರಾಚೀನ ಕವಿಗಳ ಕಾವ್ಯಗಳನ್ನು ಹೊಸ ಹೊಸ ದೃಷ್ಟಿಕೋನದಿಂದ ವಿವೇಚಿಸುವುದು ಜೀವಂತ ವಿಮರ್ಶೆಯ ಲಕ್ಷಣ. ಒಬ್ಬ ಕವಿಯನ್ನು ದೊಡ್ಡವನೆಂದು ಮಹಾಕವಿ ಪಟ್ಟದಲ್ಲಿ ಕೂಡಿಸಿ ಕೈ ತೊಳೆದು ಕೊಂಡು ಕುಳಿತರೆ ಕೆಲಸ ತೀರಿದಂತಲ್ಲ. ಕಾಲಮಾನದ ಅಗತ್ಯದ ಹಿನ್ನಲೆಯಲ್ಲಿ ಕವಿಯನ್ನು ತೂಗಿನೋಡಿ ಅವನ ಸ್ಥಾನಮಾನಗಳನ್ನು ಗುರುತಿಸಬೇಕಾಗುತ್ತದೆ. ಈ ದಿಶೆಯಿಂದ ನೋಡಿದಾಗ ಪಂಪ ಯಾವ ಕಾಲಕ್ಕೂ ಸ್ಪಂದಿಸುವ ಕವಿಯಾಗಿದ್ದಾನೆ. ಇಂದು ನಾವು ದಲಿತ ಬಂಡಾಯ ಪ್ರಗತಿಶೀಲ ವೈಚಾರಿಕತೆ ವಾಸ್ತವ ಪ್ರಜ್ಞೆಗಳೆಂಬ ಹಲವಾರು ಮಾನದಂಡಗಳನ್ನು ಕವಿಯ ಕೃತಿಯನ್ನು ವಿಮರ್ಶಿಸುವಾಗ ಉಪಯೋಗಿಸುತ್ತೇವೆ. ಇವೆಲ್ಲವುಗಳಿಗೂ ಪಂಪನ ಕಾವ್ಯಗಳಲ್ಲಿ ಉತ್ತರ ಸಿಗುತ್ತದೆ. ಅಂದು ಪಂಪನ ಕಾಲಕ್ಕಿದ್ದ ಸಮಸ್ಯೆಗಳು ಇಂದು ನಮ್ಮ ಸಮಸ್ಯೆಗಳೂ ಆಗಿವೆ. ಈ ದೃಷ್ಟಿಯಿಂದ ಪಂಪನನ್ನು ನೋಡಿದರೆ ಸಮಸ್ಯೆಗಳ ಆಯ್ಕೆಯಲ್ಲಿ ಕವಿಗಿರುವ ಸೂಕ್ಷ್ಮ ಪ್ರಜ್ಞೆ, ದೂರದೃಷ್ಟಿ, ಎಷ್ಟು ತೀಕ್ಷ್ಣವಾಗಿತ್ತೆಂಬುದು ಗೊತ್ತಾಗುತ್ತದೆ.

ಪಂಪ ಬದುಕನ್ನು ತೀರ ಹತ್ತಿರದಿಂದ ಕಂಡವನಾಗಿದ್ದ, ಬದುಕಿನ ಬಗೆಗೆ ಅಪಾರವಾದ ಪ್ರೀತಿ ವಿಶ್ವಾಸಗಳನ್ನು ಹೊಂದಿದವ ನಾಗಿದ್ದ. ಹೀಗಾಗಿ ಆತ ವಾಸ್ತವವಾದಿಯಾಗಿ ಕಾಣುತ್ತಾನಯೇ ಹೊರತು ಪಲಾಯನವಾದಿಯಲ್ಲ. ಪಂಪ ಪ್ರತಿಪಾದಿಸಿದ ಭೋಗ–ತ್ಯಾಗಗಳ ಸಮತೋಲನ ಬದುಕಿಗೊಂದು ಮಾರ್ಗಸೂಚಿ ಯಾಗಿದೆ. ಈ ಹಿನ್ನಲೆಯಲ್ಲಿ ಪಂಪ ಪ್ರತಿಪಾದಿಸಿದ ಬದುಕಿನ ಮೌಲ್ಯಗಳನ್ನು ಕುರಿತು ಈ ಕಿರು ಹೊತ್ತಿಗೆಯಲ್ಲಿ ವಿವೇಚಿಸಲಾಗಿದೆ. ಇದೆಲ್ಲ ಹೊಸ ವಿಚಾರಗಳು ಎಂದು ಹೇಳಲಾರೆ. ಈ ವಿಚಾರಗಳು ಅಲ್ಲಲ್ಲಿ ವಿದ್ವಾಂಸರಿಂದ ವಿವೇಚಿಸಲ್ಪಟ್ಟಿವೆ. ಕೆಲವರ ವಿಚಾರಗಳು ನನ್ನ ವಿವೇಚನೆಗೆ ಹೊಸ ತಿರುವನ್ನೂ ಕೊಟ್ಟಿವೆ. ಅವೆಲ್ಲ ವಿಚಾರಗಳಿಗೆ ಒಂದು ಸಮಗ್ರ ರೂಪಕೊಟ್ಟು ಏಕತಾನತೆಯನ್ನು ತರಲು ಪ್ರಯತ್ನಿಸಿದ್ದೇನೆ. ಕೆಲವು ವಿದ್ವಾಂಸರ ಕೃತಿಗಳಿಂದ ಹಲವಾರು ಮಾತುಗಳನ್ನು ಇದರಲ್ಲಿ ಎತ್ತಿಕೊಂಡಿದ್ದೇನೆ. ಈ ಋಣಕ್ಕೆ ಅವರಿಗೆ ನಾನು ಇಲ್ಲಿ ಪ್ರೀತಿ ವಿಶ್ವಾಸಗಳಿಂದ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ಈ ಚಿಕ್ಕ ಹೊತ್ತಿಗೆಯನ್ನು ಪ್ರಕಟನೆಗಾಗಿ ಸಿಫಾರಸ್ಸು ಮಾಡಿದ ತಜ್ಞ ಸಮಿತಿಗೂ, ಪ್ರಕಟ ಪಡಿಸಿದ ಕರ್ನಾಟಕ ವಿಶ್ವವಿದ್ಯಾಲಯದ ನಿರ್ದೇಶಕರಿಗೂ, ಅವರ ಸಿಬ್ಬಂದಿವರ್ಗಕ್ಕೂ ನಾನು ಚಿರಋಣಿ.

ಅಂಜುಮನ್ ಕಲಾ, ವಿಜ್ಞಾನ
ಮತ್ತು ವಾಣಿಜ್ಯ ಮಹಾವಿದ್ಯಾಲಯ,
ವಿಜಾಪೂರ

ಪ್ರೊ. ಎಸ್. ಬಿ. ಅಳಗಿ

ಪರಿವಿಡಿ

೧. ಪಂಪನ ವ್ಯಕ್ತಿತ್ವ ಪರಿಚಯ

ಹತ್ತನೆಯ ಶತಮಾನ ಕನ್ನಡ ಸಾಹಿತ್ಯದಲ್ಲಿ ಒಂದು ಸುವರ್ಣ ಯುಗ. ಆದಿಕವಿ. ಮಹಾಕವಿ ವಿಶ್ವಕವಿಯಾದ ಪಂಪ ಆ ಶತಮಾನದ ಬಹುದೊಡ್ಡ ಕಾಣಿಕೆ. ಒಂದು ಲೌಕಿಕ. ಇನ್ನೊಂದು ಆಗಮಿಕ ಕೃತಿಯನ್ನು ರಚಿಸಿ ಮುಂದಿನವರಿಗೆ ಮಾರ್ಗ ನಿರ್ಮಿಸಿದ ಯುಗಪುರುಷ. ಆ ಯುಗದ ಧ್ವನಿಯನ್ನು ಕಾವ್ಯದ ಮೂಲಕ ಕಂಡರಿಸಿ. ಭೋಗ ತ್ಯಾಗಗಳ ಸಮನ್ವಯವನ್ನು ಬದುಕಿನ ಮೂಲಕ ಸಾಧಿಸುವ ಸುಮಾರ್ಗವನ್ನು ಮಾನವ ಕುಲಕ್ಕೆ ನೀಡಿದ ಮಹಾ ಮಾನವತಾವಾದಿ. ಇವೆಲ್ಲ ಮಾತುಗಳು ಕನ್ನಡತನ. ಭಾಷಾಭಿಮಾನದ ಭಾವುಕತೆಯಿಂದ ಹೇಳಿದವುಗಳಾಗಿರದೆ ವಸ್ತುಸ್ಥಿತಿಯ ಸತ್ಯಸಂಗತಿಗಳಾಗಿವೆ. ಪಂಪನ ಹಿರಿಮೆಯನ್ನು ಪ್ರಾಚೀನ ಕವಿಗಳೇ ಪ್ರಾಮಾಣಿಕತೆಯಿಂದ ಒಪ್ಪಿಕೊಂಡಿದ್ದಾರೆ. ಹದಿನಾಲ್ಕನೆಯ ಶತಮಾನದಲ್ಲಿ ನಾಗರಾಜನೆಂಬ ಕವಿ 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದು ಹಾಡಿಹೊಗಳಿದ್ದಾನೆ. ವಿಶಾಲವಾಗಿ ಹಬ್ಬಿದ. ಹಬ್ಬುತ್ತಿರುವ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಯಾವಕಾಲಕ್ಕೂ ಸತ್ಕವಿಯಾದ ಪಂಪನೆ ಒಡೆಯನಾಗಿದ್ದಾನೆ. ಈ ಮಾತು ಹಿಂದಣ ಸಾಹಿತ್ಯಕ್ಕಂತೂ ಸರಿಯೆ. ಮುಂದಣ ಸಾಹಿತ್ಯಕ್ಕೂ ಆಹ್ವಾನವಿದ್ದಂತಿದೆ. ನಾಗಚಂದ್ರನೆಂಬ ಇನ್ನೊಬ್ಬ ಕವಿ ತನ್ನನ್ನು ಅಭಿನವಪಂಪನೆಂದು ಹೆಸರಿಸಿಕೊಂಡಿದ್ದಾನೆ. ಇದು ಪಂಪನ ಹೆಗ್ಗಳಿಕೆಗೆ ಮತ್ತೊಂದು ಸಾಕ್ಷಿ.

ಕನ್ನಡ ಸಾಹಿತ್ಯದಲ್ಲಿ ನಮ್ಮ ಕವಿಗಳ ಬದುಕಿನ ವಿವರ ಸಮಗ್ರವಾಗಿ ದೊರೆಯುತ್ತಿಲ್ಲ. ಅವರ ಜೀವಿತದ ಕಾಲ ನಿರ್ಣಯವು ಅಷ್ಟೇ ಸಂದಿಗ್ಧವಾಗಿದೆ. ಇದಕ್ಕೆ ಕಾರಣ ಅವರು ತಮ್ಮ ಪರಿಚಯ. ಜೀವನ ವಿವರ ಕೊಡುವುದು ಕೀಳರಿಮೆ ಎಂದು ತಿಳಿದುಕೊಂಡದ್ದು. ಆದರೆ ಪಂಪ ಕವಿ ತನ್ನ ಆದಿಪುರಾಣದಲ್ಲಿ ತನ್ನನ್ನು ಕುರಿತು ಸಮಗ್ರವಾಗಿ ಹೇಳಿಕೊಂಡಿದ್ದಾನೆ. ಪಂಪನ ಪೂರ್ವಜರು ವೈದಿಕಧರ್ಮದವರು. ಆದರೆ ಪಂಪನ ತಂದೆ ಭೀಮಪಯ್ಯ ವೈದಿಕ ಧರ್ಮವನ್ನು ಬಿಟ್ಟು ಜೈನಧರ್ಮ ಸ್ವೀಕರಿಸಿದ. ಅಹಿಂಸಾಧರ್ಮವಾದ ಜೈನಧರ್ಮವನ್ನು ಸ್ವೀಕರಿಸಿ ತನ್ನ ತಂದೆಯು ಆ ಕುಲದ ಹಿರಿಮೆ ಹೆಚ್ಚಿಸಿದನೆಂದು ತುಂಬ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ಹೀಗೆ ಎರಡು ಧರ್ಮಗಳ ಉನ್ನತ ಸಂಸ್ಕಾರದ ಸಂಗಮದಿಂದ ಪಂಪನಂತಹ ಮಹಾವ್ಯಕ್ತಿ ಹುಟ್ಟಿ ಬರಲು ಸಾಧ್ಯವಾಯಿತು. ಎರಡು ಮತಗಳ ಸಾಮರಸ್ಯದ ಸಂಸ್ಕಾರ, ಎರಡು ಉನ್ನತ ಧರ್ಮಗಳ ಭಿನ್ನಸಂಪ್ರದಾಯ ಇವು ಪಂಪನ ಜೀವನಕ್ಕೆ ಸಮತೆ, ಘನತೆ, ಸಹಿಷ್ಣುತೆ ತಂದು ಕೊಟ್ಟವು. ಕಾವ್ಯ ಬರೆಯುವಲ್ಲಿಯೂ ಮಹಾಕವಿಯೆನಿಸಿಕೊಳ್ಳುವಲ್ಲಿಯೂ ಈ ಗುಣಗಳು ಅವನಿಗೆ ಹೆಚ್ಚು ಸಹಾಯಕಾರಿಯಾದವು.

ಪಂಪ ಸ್ವಭಾವತಃ ರಸಿಕ. ಬದುಕಿನ ಚೆಲುವು ಒಲವುಗಳನ್ನು ಮನಸಾರೆ ಮೆಚ್ಚಿಕೊಂಡು ಅನುಭವಿಸಿದವ. ಧಾರ್ಮಿಕ ನೀತಿಗಟ್ಟಿನ ಹಿನ್ನಲೆಯಲ್ಲಿ ರೂಪಗೊಂಡ ಬದುಕಿನ ಭೋಗ ಜೀವನಕ್ಕೆ ಅವನಿಂದ ಸದಾ ಸ್ವಾಗತ. ಅವನೇ ಹೇಳುವಂತೆ 'ಧರ್ಮಂ ಪ್ರಧಾನಂ ಅರ್ಥಂ ಧರ್ಮಾಪೇಕ್ಷಿತಂ ಫಲಂ ಅದರ್ಕೆ ರಮ್ಯಮದು ಕಾಮಂ'. ಧರ್ಮ, ಅರ್ಥ, ಕಾಮಗಳ ಸಮಾಯೋಜಿತ. ಸಮಬೆರಕೆಯಿಂದ

ಬದುಕು ಉದಾತ್ತವಾಗಬೇಕೆಂಬುದು ಆತನ ಬಯಕೆ. ಸಾರಸಾಂಗ ಜಂಗಮಾ ಲತಾ ಲಲಿತಾಂಗಿಯರಿಂದ ಮತ್ತೆ ಸಂಸಾರಂ ಬಯಸುದು ಪಂಪನು ಸಂಸಾರದ ಬಗೆಗೆ ಇಟ್ಟುಕೊಂಡ ಅಭಿಪ್ರಾಯ.[೧] ಆದಿ ಪುರಾಣದ ಪೀಠಿಕಾಭಾಗದಲ್ಲಿ ಕವಿ ತನ್ನ ರೂಪದರ್ಶನ ಈ ರೀತಿ ಯಾಗಿ ಮಾಡಿ ಕೊಡುತ್ತಾನೆ.

> ಕದಳೀ ಗರ್ಭಶ್ಯಾಮಂ
> ಮೃದುಕುಟಿಲ ಶಿರೋರುಹಂ ಸರೋರುಹವದನಂ
> ಮೃದು ಮಧ್ಯಮಂ ತನು ಹಿತಮಿತ
> ಮೃದುವಚನಂ ಲಲಿತ ಮಧುರ ಸುಂದರ ವೇಷಂ
>
> ಆ. ಪು. ೧–೨೯

ಬಾಳೆಯ ಸುಳಿಯ ಹಾಗೆ ಶ್ಯಾಮಲವಾದ ಮೈಬಣ್ಣ. ಕಮಲದಂತಹ-ಮುಖ. ರೇಶಿಮೆಯಂತೆ ಮೃದುವಾದ ಗುಂಗುರುಕೂದಲು. ಅತಿ ಎತ್ತರವೂ ಕುಳ್ಳೂ ಅಲ್ಲದ ನಿಲುವು. ಕೋಮಲಾಂಗ, ಹಿತಮಿತವಾದ ಮೃದು ಭಾಷೆ. ಒಟ್ಟಿನಲ್ಲಿ ಹೇಳುವುದಾದರೆ ಆಕರ್ಷಕ ರೂಪ. ಇಂತಹ ರೂಪವುಳ್ಳ ಪಂಪ ಸ್ತ್ರೀ ರೂಪದ ಮೋಹಕತೆಯನ್ನು ಬಲ್ಲವನಾಗಿದ್ದ.[೨] ಕೆಲ ಸ್ತ್ರೀಯರು ತನ್ನ ಮೇಲೆ ಮೋಹಗೊಂಡಿದ್ದರೆಂದು ಯಾವ ಮುಚ್ಚುಮರೆಯಿಲ್ಲದೆ ಹೇಳಿದ್ದಾನೆ.

ತನಗೂ ಕೇರಳ, ಆಂಧ್ರ, ಮಲಯ ದೇಶದ ಸ್ತ್ರೀಯರಿಗೂ ಇದ್ದ ಸಂಬಂಧವನ್ನು ಯಾವ ಸಂಕೋಚವಿಲ್ಲದೆ ಹೇಳಿಕೊಂಡಿದ್ದಾನೆ. 'ಲಲಿತಾಲಂಕಾರಂ' ಎಂದು ವಿಕ್ರಮಾರ್ಜುನ ವಿಜಯದಲ್ಲೂ. 'ವನಿತಾಕಟಾಕ್ಷ, ಕುವಲಯವನ ಚಂದ್ರಂ' ಎಂದು ಆದಿ

---

೧ ವಿ.ವಿ. ೧-೧೧೪   ೨ ಪಂಪ ಶೀ. ನಂ. ಶ್ರೀ

ಪುರಾಣದಲ್ಲೂ ತನ್ನ ಬಗೆಗೆ ಹೇಳಿಕೊಂಡಿದ್ದಾನೆ. ಪಂಪ ಸುಂದರ. ರಸಿಕ. ಅಚ್ಚುಕಟ್ಟಾದ ವೇಷ ಭೂಷಣಗಳನ್ನು ತುಂಬ ಮೆಚ್ಚಿದವನು. ಪ್ರೇಮದ ಸುಖವನ್ನು ಅನುಭವಿಸಿ ಬಲ್ಲವನು. ಮಲ್ಲಿಗೆ ಮೊದಲಾದ ಕಂಪಿಡುವ ಹಲವು ಹೂವುಗಳ ಚೆಲುವಿಗೆ ಮನ ಸೋತವನು. ಗಾನದಿಂಪಿಗೆ ಮೈ ಮರೆದವನು. ಸಂಸಾರ ಸುಖವನ್ನು ಅಲ್ಲಗಳೆಯದೆ. ಅದರ ಸಾರವನ್ನು ಹೀರುವ ಸಂಸಾರ ಸಾರೋದಯನು.

ಪಂಪನದು ಸ್ವಾಭಿಮಾನದ ಬದುಕು. ಅರಿಕೇಸರಿಯ ಆಸ್ಥಾನದ ಕವಿಯಾಗಿದ್ದರೂ ಅವನು ತನ್ನತನವನ್ನು ಕಳೆದುಕೊಂಡು ಬಾಳಿದವನಲ್ಲ. ಆದಿಪುರಾಣದಲ್ಲಿ ಆಶ್ರಯದಾತನಾದ ಅರಿಕೇಸರಿಯನ್ನು ಎಲ್ಲಿಯೂ ಸ್ಮರಿಸಿಲ್ಲ. ಅಷ್ಟೇ ಅಲ್ಲ 'ಪೆಱರೀವುದೇಂ ಪೆಱಱಮಾಡುವುದೇಂ ಪೆಱಱಿಂದಮಪ್ಪುದೇಂ' ಎಂದೂ ಪ್ರಶ್ನಿಸಿದ್ದಾನೆ. ರಾಜಾಶ್ರಯದಲ್ಲಿದ್ದ ಒಬ್ಬ ಕವಿ ಈ ತೆರನಾಗಿ ಹೇಳಬೇಕಾದರೆ ಅವನ ಸ್ವಾಭಿಮಾನ, ಧಾರ್ಷ್ಟ್ಯಗುಣ ಮೆಚ್ಚುವಂತಹದ್ದಾಗಿದೆ. ಪಂಪ ನಿಷ್ಠುರನಾದಂತೆ. ವಿನಯಶಾಲಿಯೂ ನಿರ್ಮಾತ್ಸರ್ಯನೂ. ಸ್ನೇಹಮಯಿಯೂ ಆಗಿದ್ದ.

ಪಂಪನಿಗೆ ತನ್ನ ಕವಿತಾ ಸಾಮರ್ಥ್ಯದ ಬಗೆಗೆ ತನ್ನಕೃತಿಗಳ ಬಗೆಗೆ ಅಪಾರವಾದ ಹೆಮ್ಮೆ ಮತ್ತು ಆತ್ಮವಿಶ್ವಾಸ. 'ಸರಸ್ವತಿಗೆ ವಿಳಾಸಮಂ ಪೊಸತು ಮಾಡುವ (ವಿ. ವಿ. ೧೪-೬೧) ವಾಗ್ವಿಲಾಸಿತನಗೆ ಮಾತ್ರ ಇದೆ. ತನ್ನ ಸಾಮರ್ಥ್ಯ ಯಾವ ಕವಿಯಲ್ಲಿದೆ ಎಂದು ಆಹ್ವಾನಿಸುತ್ತಾನೆ. ಈ ಮಾತನ್ನು ತನ್ನ ಕೃತಿಗಳಲ್ಲಿ ಸಾಧಿಸಿಯೂ ತೋರಿಸಿದ್ದಾನೆ. ತನ್ನ ವಿಕ್ರಮಾರ್ಜುನ ವಿಜಯ

ಕಾವ್ಯರಚನೆಗೆ ಕಾರಣ 'ಕತೆ ಪಿರಿದಾದರೂ ಅದಕ್ಕೆ ಕೊಂಚವೂ ಭಂಗ ಬರದಂತೆ ಸಮಸ್ತ ಭಾರತವನ್ನು ಹೇಳಿದ ಕವೀಶ್ವರರಿಲ್ಲ. ಹಾಗೆ ಹೇಳುವವನಾದರೆ ಪಂಪನೆ ಹೇಳಬಲ್ಲ' ಎಂದು ಪಂಡಿತರು ಒತ್ತಾಯಿಸಲು ಬರೆಯತೊಡಗಿದೆನೆಂದು ಹೇಳುತ್ತಾನೆ. ಇದರಿಂದ ಪಂಪ ಸ್ವಪ್ರತಿಷ್ಠೆ ಪ್ರತಿಪಾದಕ, ಗರ್ವಿ ಎಂದು ಮೇಲ್ನೋಟಕ್ಕೆ ಕಂಡು ಬಂದರೂ, ಸ್ವಭಾವತಃ ಪಂಪ ಹಾಗಲ್ಲ. ಅತ ವಿನಯಶೀಲನೂ ನಿಗರ್ವಿಯೂ ಆಗಿದ್ದ. ತಾನು ಬರೆಯುತ್ತಿರುವ ಪಂಪ ಭಾರತಕ್ಕೆ ವ್ಯಾಸರ ಭಾರತವೆ ಮೂಲವಾಗಿದ್ದರೂ 'ವ್ಯಾಸರ ಸರಿಸಮಾನನೆಂಬ ಗರ್ವವೆನಗಿಲ್ಲ'ವೆಂದು ತನ್ನ ವಿನಯಭಾವವನ್ನು ವ್ಯಕ್ತಗೊಳಿಸಿದ್ದಾನೆ. 'ಗರ್ವಮೆದೋಷಂ ಅಬಿತ್ರಿಗಂ ದೋಷಮೆ' ಎಂದು ಗರ್ವಿತ ಬದುಕು ತಾನೆ ಕಡೆಗಣಿಸಿ ನುಡಿದಿದ್ದಾನೆ. ಎಂದು ವಿಕ್ರಮಾರ್ಜುನ ವಿಜಯದ ಪೀಠಿಕಾ ಭಾಗದಲ್ಲಿ ಅರಿಕೇಸರಿಗೆ ಸರಸ್ವತಿ ಬುದ್ಧಿಯನ್ನು ದಯಪಾಲಿಸಲಿ ಎಂದು ಬೇಡಿಕೊಳ್ಳುವಲ್ಲಿ ಅವನ ವಿನೀತಗುಣವನ್ನು ಕಾಣಬಹುದು.

> ಕ್ಷಯ ಮಾಣಿಮಿಲ್ಲಕೇಬ್ಬ ಕಡೆಗಂಡವನಾವನು ಮಿಲ್ಲೆನಲ್ ತದ
> ಕ್ಷಯ ನಿಧಿತಾನೆ ತನ್ನನೊಸೆದೋರ್ಲ್ ಪಂಗರಿರಿಲ್ಲೆನಿಪ್ಪ
>
> (ವಿ. ವಿ. ೧–೫)

'ಈ ಜಗತ್ತಿನಲ್ಲಿ ಜ್ಞಾನಕ್ಕೆ ಕೊನೆಯಿಲ್ಲ. ಎಲ್ಲಾ ಅರಿತಿದ್ದೇನೆಂಬವನಿಗೆ ಅದು ದೊರೆತಿಲ್ಲ. ಆದರೆ ಸೇವಾಭಾವನೆಯಿಂದ ಸಾಧನೆ ಮಾಡುವವನಿಗೆ ಅದು ಅಸಾಧ್ಯವೂ ಇಲ್ಲ' ಇದು ಪಂಪನ ಸಭ್ಯತೆಗೆ ಒಂದು ಉತ್ತಮ ನಿದರ್ಶನ.

ಪಂಪ ಸ್ನೇಹಮಯಿ. ವಿಕ್ರಮಾರ್ಜುನವಿಜಯದಲ್ಲಿ ಕರ್ಣ ಮತ್ತು ದುರ್ಯೋಧನರ ಪಾತ್ರಗಳ ಮೂಲಕ ಸ್ನೇಹದ ಆದರ್ಶಗಳನ್ನು ಹೇಳಿದ್ದಾನೆ. ತನ್ನ ಮತ್ತು ಅರಿಕೇಸರಿಯ ಸ್ನೇಹ ಸಂಬಂಧವನ್ನು ಆ ಪಾತ್ರಗಳ ಮೂಲಕ ವ್ಯಕ್ತಪಡಿಸಿದ್ದಾನೆ. ಗುಣವಂತನ ಸ್ನೇಹಕ್ಕೆ ಯಾವ ಜಾತಿ ಮತ ಧರ್ಮಗಳು ಅಡ್ಡ-ಗೋಡೆಯಾಗಲಾರವು ಎಂಬುದು ಆತನ ಸ್ಪಷ್ಟ ನಿಲುವು.

ಪಂಪ ಎರಡು ಧರ್ಮಗಳ ಸಂಸ್ಕಾರ ಪಡೆದರೂ, 'ಜಿನೇಂದ್ರ-ಧರ್ಮಮೆ ವಲಂ ದೊರೆಧರ್ಮದೊಳ್' ಎಂದು ನುಡಿದರೂ, ಕೆಲವು ಸಲ ಇವನ್ನೆಲ್ಲ ಮೀರಿ 'ಮನುಷ್ಯಜಾತಿ ತಾನೊಂದೆವಲಂ' ಎಂದು ಹೇಳುವಲ್ಲಿ ಆತನ ಜಾತಿಭಾವನೆಗಳೆಲ್ಲಾ ಈ ತತ್ವದ ಮುಂದೆ ಹತಬಲವಾಗಿ ಕೊಚ್ಚಿಕೊಂಡು ಹೋಗಿದ್ದನ್ನು ಕಾಣಬಹುದು.

ಪಂಪ ಬದುಕಿದ್ದು ವೀರಯುಗದಲ್ಲಿ. ಕ್ಷಾತ್ರತೇಜಸ್ಸು ತುಂಬಿ ತುಳುಕುತ್ತಿದ್ದ ಕಾಲದಲ್ಲಿ. ಹೀಗಾಗಿ ಆತನ ಬದುಕು ರೂಪಗೊಂಡದ್ದು ವೀರತನದ ಹಿನ್ನಲೆಯಲ್ಲಿ. ಆ ಕಾಲದ ಜನರಿಗೆ ಶೌರ್ಯವು ಧರ್ಮದಷ್ಟೇ ಪವಿತ್ರವಾಗಿತ್ತು. ಶೂರನಾದವನು ಪೂಜ್ಯವ್ಯಕ್ತಿಯಾಗಿದ್ದ. ಆದಿಪುರಾಣದಲ್ಲಿ 'ಎಸೆವ ರಣಾನಕ ರೌದ್ರ ಘೋಷಂ ಪರ್ವೆಸನಮಂ ಉಂಟು ಮಾಡಿಯುದು ಪಂದೆಗಂ' ಎಂಬಂತಹ ಮಾತುಗಳು ಬರುತ್ತವೆ. ಹೀಗೆ ಪಂಪನ ಕಾಲ ತುಂಬ ಮೌಲ್ಯಗಳಿಂದ ಕೂಡಿದ್ದ ಕಾಲವದು. ಬದುಕಿನ ಮೌಲ್ಯಗಳಿಗಾಗಿ ಹೋರಾಟ ನಡೆಸಿದ ಕಾಲವದು. ಆತ ಪ್ರತಿಪಾದಿಸಿದ ಅಂದಿನ ಮೌಲ್ಯಗಳು ಮನುಕುಲದ ಯಾವತ್ತೂ ಮೌಲ್ಯಗಳು

ಪರಿಣಮಿಸಿವೆ. ಆದುದರಿಂದ ಪಂಪ ಆ ಕಾಲಕ್ಕಷ್ಟೇ ಸೀಮಿತನಾಗದೆ, ಯಾವಕಾಲಕ್ಕೂ ಜೀವಂತ ಕವಿಯಾಗಿ ಕಾಣುತ್ತಾನೆ.

ಪಂಪ. ಭಾರತ ಮುಗಿಸುವ ಮುನ್ನ ತನ್ನೆರಡು ಕೃತಿಗಳ ರಚನೆಯ ಉದ್ದೇಶ, ತಾನು ಕೈಕೊಂಡ ಕಾರ್ಯದ ದೃಷ್ಟಿಕೋನವನ್ನು 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' ಎಂದು ಸ್ಪಷ್ಟಪಡಿಸಿದ್ದಾನೆ. ವಿಕ್ರಮಾರ್ಜುನವಿಜಯವು ಲೌಕಿಕ ಭಾವದ ಮಹಾವ್ಯಕ್ತಿಗಳ ತೇಜಃಪೂರ್ಣಕಾಂತಿಯಿಂದ ಲೋಕ ಪೂಜ್ಯವೆನಿಸಿದರೆ, ಆದಿಪುರಾಣವು ಅಲೌಕಿಕ ಭಾವದ ಆದಿತೀರ್ಥಂಕರನ ಪರಮ ಪವಿತ್ರ ಜೀವನ ನಿರೂಪಣೆಯಿಂದ ಜಿನಾಗಮದ ಕೃತಿಯಾಗಿದೆ. ಒಂದು. ಲೌಕಿಕ ಜೀವನದ ಅನಿವಾರ್ಯತೆಯನ್ನು ಎತ್ತಿತೋರಿಸಿದರೆ, ಇನ್ನೊಂದು. ಅಲೌಕಿಕ ಜೀವನದ ಅವಶ್ಯಕತೆಯನ್ನು ಒತ್ತಿಹೇಳುತ್ತದೆ. ತನ್ನೆರಡು ಕೃತಿಗಳಲ್ಲಿ. ಪಂಪ ಕಾವ್ಯ ಧರ್ಮವನ್ನೂ, ಸೌಂದರ್ಯಧರ್ಮವನ್ನೂ ಮತ್ತು ಜೀವನಧರ್ಮವನ್ನು ಮರೆತಿಲ್ಲ. ಲೌಕಿಕ ಕಾವ್ಯದಲ್ಲಿ ಅವನ ಮುಕ್ತ ಜೀವನ ದೃಷ್ಟಿ ನೆಲೆನಿಂತುದನ್ನು ಕಂಡರೆ. ಅಲೌಕಿಕ ಕಾವ್ಯದಲ್ಲಿ ಮತೀಯ ಮಿತಿಗಳಿಂದ ಮುಕ್ತವಾದ ವಿಶಾಲ ಜೀವನದೃಷ್ಟಿ ಕೇಂದ್ರೀಕೃತವಾದುದನ್ನು ಕಾಣುತ್ತೇವೆ. ಹೀಗೆ ಪಂಪ ಒಂದು ಧರ್ಮಕ್ಕೆ ಸೇರಿದವನಾದರೂ ಬದುಕಿನ ಮೌಲ್ಯಗಳನ್ನು ಎತ್ತಿ ಹಿಡಿದವನಾಗಿ ತೋರಿದ್ದಾನೆ. ಆದುದರಿಂದಲೇ ಪಂಪನ ವ್ಯಕ್ತಿತ್ವ ಸರ್ವಗ್ರಾಹಿಯಾಗಿದೆ.

೨. ಮೌಲ್ಯ ಒಂದು ವಿವೇಚನೆ

ಸಾಹಿತ್ಯ ವಿಮರ್ಶೆಯಲ್ಲಿ 'ಬದುಕಿನ ಮೌಲ್ಯ' 'ಸಾಮಾಜಿಕ ಮೌಲ್ಯ' ಎನ್ನುವ ಮಾತು ಹೊಸದಾದರೂ ಅವುಗಳಿಂದ ಹೊರಡುವ ಅರ್ಥ ಪುರಾತನವಾದುದು. ಸಾಹಿತ್ಯ, ಕಾಲಮಾನದ ಅಗತ್ಯ ಹಿನ್ನಲೆಯಲ್ಲಿ ರಚನೆಗೊಳ್ಳುತ್ತದೆ. ಅದರ ವಿಮರ್ಶೆ. ಕಾಲಗತಿಸಿದಂತೆ. ಜೀವನದ ರೀತಿ ನೀತಿ ಬದಲಾದಂತೆ ಹೊಸಹೊಸ ದೃಷ್ಟಿಕೋನದಿಂದ ಪರಿಶೀಲಿಸಲಾಗುತ್ತದೆ. ಇದು ಸಾಹಿತ್ಯ ಕ್ಷೇತ್ರದಲ್ಲಿ ನಡೆಯುವ ಸಹಜ ಕ್ರಿಯೆ. ಮನುಷ್ಯ. ಸೃಷ್ಟಿಯಲ್ಲಿರುವ ವಸ್ತುಗಳು ತನ್ನ ಸುಖಜೀವನಕ್ಕೆ ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾಗಿವೆ, ಎಂಬುದರ ಹಿನ್ನಲೆಯಲ್ಲಿ ತನ್ನ ಸಂಶೋಧನೆ ಮುಂದುವರಿಸುತ್ತಿದ್ದಾನೆ. ಇದಕ್ಕೆ ಸಾಹಿತ್ಯಲೋಕವೂ ಹೊರತಾಗಿಲ್ಲ. ಕೇವಲ ರಂಜನೆ. ರಮ್ಯತೆ. ಆನಂದದಿಂದೇನು ಪ್ರಯೋಜನ ? ಅದು ಬದುಕಿಗೂ ಪ್ರಯೋಜನವಾಗಬೇಕೆಂದು ವಾದಿಸಿದ. ಪ್ಲೇಟೊ ತನ್ನ ಆದರ್ಶರಾಜ್ಯ ನಿರ್ಮಾಣದಲ್ಲಿ ಈ ಕಾರಣದಿಂದಲೇ ಕವಿಗಳನ್ನು ದೂರಿಡುತ್ತಾನೆ. ಪ್ರಾಚೀನ ಭಾರತದಲ್ಲಿಯೂ 'ಕಾವ್ಯಾಲಾಪಾಂಶ್ಚ ವರ್ಜಯೇತ್' ಎಂಬ ಅಭಿಪ್ರಾಯ ಮೂಡಿತ್ತು. ಆದರೆ ಮುಂದೆ ವಿವೇಚನಾಶಕ್ತಿ ಬೆಳೆದಂತೆ. ಮೀಮಾಂಸಾ ಶಾಸ್ತ್ರ ಬೆಳೆದಂತೆ. ಹೊಸ ಹೊಸ ಆಶಯಗಳು. ವಿಚಾರಗಳು ಮೂಡಿಬಂದವು. ಈಗ ಕವಿಯನ್ನು ಆತನ ಕಾವ್ಯವನ್ನು ನೋಡುವ ದೃಷ್ಟಿಕೋನ ಬದಲಾಯಿತು. 'ಕಾಂತಾಸಂಮಿತ ತಯೋಪದೇಶ

ಯುಜೇ' ಎಂಬ ಮಮ್ಮಟನ ಹೇಳಿಕೆಯಿಂದ ಕಾವ್ಯತತ್ತ್ವವು ಇನ್ನೊಂದು ಮುಖದ ದರ್ಶನವಾಯಿತು. ಕವಿರಾಜಮಾರ್ಗ ಕಾರನು,

> ಪಾಪಮಿದು ಪುಣ್ಯಮಿದು ಹಿತ
> ರೂಪಮಿದಹಿತ ಪ್ರಕಾರ ಮಿದು ಸುಖಮಿದುದುಃ –
> ಖೋಪಾತ್ತಮಿಂದೆಂದಱಿಪುಗು
> ಮಾಪರಮಕವಿ ಪ್ರಧಾನರಾಕಾವ್ಯಂಗಳ್

ಎಂದು ಹೇಳಿದ್ದಾನೆ. ಅಂದಮೇಲೆ ಕಾವ್ಯವು ಸಮಾಜದ ಮೇಲೆ ದುಷ್ಪರಿಣಾಮವನ್ನೋ, ಸತ್ಪರಿಣಾಮವನ್ನೋ, ಎಸಗಬಲ್ಲ ಸಾಮರ್ಥ್ಯವುಳ್ಳದೆಂಬುದು ಸುಸ್ಪಷ್ಟ. ಕವಿಯೂ ಸಮಾಜ ಜೀವಿ. ಆತ ತನ್ನಸುತ್ತಮುತ್ತಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ರೂಪ ಗೊಂಡವ. ಹೀಗಾಗಿ ಆ ಸಮಾಜದ ಆಶೋತ್ತರಗಳು, ರೀತಿನೀತಿ ಗಳು, ಆತನ ಕೃತಿಯಲ್ಲಿ ಅಭಿವ್ಯಕ್ತಿಗೊಂಡಿರುತ್ತವೆ. ಆದುದರಿಂದಲೇ ಸಾಹಿತ್ಯ 'ಜನಜೀವನದ ಪ್ರತಿಬಿಂಬ' ಎಂದು ಹೇಳುತ್ತೇವೆ. ಒಬ್ಬ ಕವಿಯ ಕೃತಿಯನ್ನು ಅಭ್ಯಾಸಮಾಡುವಾಗ ಆತ ಪ್ರಚಲಿತ ಜನಜೀವನಕ್ಕೆ ಎಷ್ಟರ ಮಟ್ಟಿಗೆ ಸ್ಪಂದಿಸುತ್ತಾನೆ ಎಂಬುದು ಮುಖ್ಯ. ಈ ಹಿನ್ನೆಲೆಯಲ್ಲಿ ಕವಿಯ ಸ್ಥಾನಮಾನಗಳನ್ನು ಗುರುತಿಸಲಾಗುತ್ತದೆ. ಪಂಪ ಕನ್ನಡದ ಆದಿಕವಿ ಮಹಾಕವಿ ಎಂದು ಹೇಳುತ್ತೇವೆ. ಆತ ನಮಗೆ ಇಂದು ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಾನೆ ? ಎಂಬ ಪ್ರಶ್ನೆ ಸಹಜ. ಆತ ತನ್ನ ಕಾಲಕಷ್ಟೇ ಸೀಮಿತನಾಗಿರುವನೋ ಅಥವಾ ಮುಂದಿನ ಸಮಾಜಕ್ಕೆ ಏನನ್ನಾದರೂ ಕೊಡಲು

ಪ್ರಯುಕ್ತಿಸಿದ್ದಾನೆಯೆ? ಈ ವಿಷಯದ ವ್ಯಾಪ್ತಿಯಲ್ಲಿ ಪಂಪನ
ಬದುಕಿನ ಮೌಲ್ಯಗಳನ್ನು ಗುರುತಿಸಬೇಕಾಗಿದೆ.

ಪಂಪ ಪ್ರತಿಪಾದಿಸಿದ ಬದುಕಿನ ಮೌಲ್ಯಗಳನ್ನು ವಿವೇ
ಸುವ ಮುನ್ನ 'ಮೌಲ್ಯ' ಎಂದರೇನು? ಎಂಬುದನ್ನು ನೋಡಬೇಕಾ
ಗುತ್ತದೆ. ಜೀವನದ ಯಾವುದೇ ಒಂದು ಅವಶ್ಯಕತೆಯನ್ನು
ಪೂರೈಸುವ ಸಾಧನವನ್ನು ಮೌಲ್ಯ ಎಂದು ಸ್ಥೂಲವಾಗಿ ಹೇಳ
ಬಹುದು'[೧] ಜೀವನದ ಅವಶ್ಯಕತೆಯೆಂದಾಗ ಅನ್ನ ವಸತಿ ವಸ್ತ್ರ
ದಿಗಳು ಎಂದು ಸಹಜವಾಗಿ ಉತ್ತರ ಬರುತ್ತದೆ. ಇವು ಒಂದು
ದೃಷ್ಟಿಯಿಂದ ಮೌಲ್ಯಗಳೇ; ಆದರೆ ಜೀವನ ಇವಿಷ್ಟರಿಂದಲೇ
ಪೂರ್ಣತೆ ಪಡೆಯುವದಿಲ್ಲ. ಜೀವಿಯು ಅಂತರಂಗ ಮತ್ತೆ ಏನನ್ನೋ
ಅಭೌತಿಕವಾದದ್ದನ್ನು ಬಯಸುತ್ತದೆ. ಆ ಅಂತರಂಗದ ತುಡಿತ
ಹಂಬಲದ ಹುಡುಕುವಿಕೆಯಿಂದ ಕಲೆ, ಸಾಹಿತ್ಯ, ಧರ್ಮಗಳು
ಹುಟ್ಟಿಕೊಂಡವು. ಇವುಗಳ ಸುಮಧುರವಾದ ಬಂಧನದಿಂದ
ಬಾಳು ಸುಸಂಸ್ಕೃತಗೊಂಡಿತು. ಇಂತಹ ಸುಸಂಸ್ಕೃತತೆ ಸಾಹಿತ್ಯ
ದಲ್ಲಿ ಅಭಿವ್ಯಕ್ತಗೊಂಡು ಬಾಳಿಗೊಂದು ದಾರಿದೀಪವಾಯಿತು.
ಮಾನವೀಯತೆಯ ಆಧಾರದ ಮೇಲೆ ಕಾಲ, ದೇಶ ಧರ್ಮಗಳ
ಕಟ್ಟಳೆಯಿಲ್ಲದೆ ಸಾರ್ವತ್ರಿಕವಾಗಿ ಅನ್ವಯಿಸುವ ಸೂತ್ರಗಳನ್ನು
ಬದುಕಿನ ಮೂಲಕ ಕಂಡುಕೊಂಡರು. ಅವು ಸಾಹಿತ್ಯದಲ್ಲಿ ಅಭಿವ್ಯಕ್ತಿ—
ಸಲ್ಪಟ್ಟಾಗ ಮೌಲ್ಯಗಳಾಗಿ ಪರಿಣಮಿಸಿದವು. ಇವು ದೇಶ, ಕಾಲ
ಗಳಿಗೆ ಅತೀತವಾದವುಗಳಾಗಿವೆ.

---

೧ ವಚನಸಾಹಿತ್ಯದ ವೈಚಾರಿಕ ಅಧ್ಯಯನ
—ಡಾ. ಎಚ್. ತಿಪ್ಪೇರುದ್ರಸ್ವಾಮಿ ಪು. ೩

ಪ್ರತಿಯೊಂದು ಕಾಲವೂ ಸಮಾಜದಲ್ಲಿ ಒಂದೊಂದು ಬಗೆಯ ಮೌಲ್ಯವನ್ನು ಹೊಂದಿರುತ್ತದೆಂಬುದು ಸುಸ್ಪಷ್ಟ. ಹಿಂದಿನ ಕಾಲದಲ್ಲಿದ್ದ ಮೌಲ್ಯಗಳು ಇಂದು ಇರಲಿಕ್ಕಿಲ್ಲ, ಇಂದಿದ್ದ ಮೌಲ್ಯಗಳು ಮುಂದೆ ಇರುತ್ತವೆಂಬ ಭರವಸೆಯಿಲ್ಲ; ಅವು ಕಾಲದ ಅಗತ್ಯಕ್ಕನುಗುಣವಾಗಿ ಬದಲಾವಣೆ ಹೊಂದುತ್ತ ಸಾಗುತ್ತವೆ. ಆದರೆ ಕೆಲವು ಮೌಲ್ಯಗಳು ಅಂದಂದಿನ ಯುಗಧರ್ಮದ ಧ್ವನಿಯಾಗಿ ಹೊರಹೊಮ್ಮುವದರೊಂದಿಗೆ ಸರ್ವಕಾಲಿಕ ಸತ್ಯವನ್ನು ಪ್ರತಿಪಾದಿಸುತ್ತವೆ. ಇವನ್ನು ಸರ್ವಕಾಲಿಕ ಮೌಲ್ಯಗಳೆಂದು ಕರೆಯಬಹುದು. ಉದಾಹರಣೆಗಾಗಿ ವಚನಕಾರರ 'ದಯವೇ ಧರ್ಮದ ಮೂಲ.' 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲ ಸಂಗನ ಶರಣರೆ ಕುಲಜರು' ಎಂಬಂತಹ ಮೌಲ್ಯಗಳು ಯಾವ ಕಾಲಕ್ಕೂ ತಮ್ಮ ಶಕ್ತಿಯನ್ನು ಕಳೆದುಕೊಳ್ಳದೆ, ಮಾಸದ ಮೌಲ್ಯಗಳಾಗಿ ಪರಿಣಮಿಸಿವೆ.

ಕನ್ನಡದ ಪ್ರಾಚೀನ ಕವಿಗಳು ತಮ್ಮ ಕಾವ್ಯಕ್ಕೆ ಆರಿಸಿಕೊಂಡ 'ವಸ್ತು', ಆಗಲೇ ಪ್ರಸಿದ್ಧವಾದ ಪುರಾಣ ಮಹಾಭಾರತದಂತಹ ಸಿದ್ಧವಸ್ತುಗಳಿಂದ. ಇದನ್ನು ಕನ್ನಡದ ಬಹಳಷ್ಟು ಕವಿಗಳು ಬಳಸಿದ್ದಾರೆ. 'ಪಂಪನ ವಿಕ್ರಮಾರ್ಜುನ ವಿಜಯಕ್ಕೆ ವ್ಯಾಸಭಾರತದ ಕಥೆ ಮೂಲವಾದರೆ, ಆದಿಪುರಾಣಕ್ಕೆ ಜಿನಸೇನಾಚಾರ್ಯರ ಪರಂಪರೆಯ ಪುರಾಣ ಮೂಲವಾಗಿದೆ. ಆದರೆ ಪಂಪನಲ್ಲಿ ಎರಡು 'ವಸ್ತು'ಗಳೂ ಮೂಲದಿಂದ ಬೇರೆಯಾದ ಸತ್ತ್ವವನ್ನು ಪಡೆದಿವೆ. ಒಬ್ಬ ಕವಿಯು ಕಾವ್ಯಸತ್ತ್ವವನ್ನು ಗುರುತಿಸುವಲ್ಲಿ, ಆತ ಸಾಮಾಜಿಕ ಮೌಲ್ಯ ಪ್ರಜ್ಞೆಯನ್ನು ಎಷ್ಟರಮಟ್ಟಿಗೆ ಪಡೆದವನಾಗಿದ್ದಾನೆಂಬುದು ಪ್ರಮುಖ ಪಾತ್ರವಹಿಸುತ್ತದೆ. ಒಬ್ಬ ದೊಡ್ಡ ಕವಿ ಕೆಲ

ಸಾಂಪ್ರದಾಯಿಕ ಸಂಕೋಲೆಗಳಿಂದ ಬಂಧಿತನಾಗಿದ್ದರೂ "ತನ್ನ ಪ್ರತಿಭೆಯಿಂದ. 'ವಸ್ತು' ವನ್ನು ನಿರ್ವಹಿಸುವ ರೀತಿಯಿಂದ. ತನ್ನ ಸ್ವಕೀಯತೆಯನ್ನು ಕೃತಿಯಲ್ಲಿ ಕಾಣಿಸುವದರ ಜೊತೆಗೆ ಸಮಾಜದಲ್ಲಿ ರೂಪಪಡೆಯುತ್ತಿರುವ ಹೊಸ ಚಲನೆಗಳಿಗೂ ಅಭಿವ್ಯಕ್ತಿಕೊಡುತ್ತಾನೆ. ಇದಕ್ಕೆ ಕವಿಗೆ ಅತ್ಯುಚ್ಚವಾದ 'ಸಾಮಾಜಿಕ ಪ್ರಜ್ಞೆ ಇರಬೇಕಾಗುತ್ತದೆ. ಅಂಥ ಪ್ರಜ್ಞೆ. ಇದ್ದಾಗ ಮಾತ್ರ ಅವನಿಗೆ ಸಮಗ್ರದೃಷ್ಟಿ ಬರುತ್ತದೆ"[೧].

ನಾವು ಅನುಭವಗಳನ್ನು ಒಳ್ಳೆಯದು. ಕೆಟ್ಟದು. ಬೆಲೆಯುಳ್ಳದ್ದು. ಬೆಲೆಯಿಲ್ಲದ್ದು ಎಂದು ವಿಭಾಗಿಸಿ ನೋಡುವುದು ಸ್ವಾಭಾವಿಕ. ಯಾವುದನ್ನು 'ಬೆಲೆವುಳ್ಳವು' ಅಥವಾ 'ಮೌಲ್ಯಗಳು' ಎನ್ನುತ್ತೇವೆಯೋ ಅವು ನಮ್ಮ ಬದುಕಿನ ತಳಹದಿಯಾಗಿರತಕ್ಕವು. ಅವು ಒಂದು ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವ ಪರಮ ಪುರುಷಾರ್ಥಗಳು. ಅವುಗಳನ್ನು ಸಾಮಾನ್ಯವಾಗಿ—ಸಾಮಾಜಿಕ, ನೈತಿಕ. ತಾತ್ವಿಕವೆಂದು ವಿಭಾಗಿಸಬಹುದು. ಕವಿಯು ಕೃತಿ ಬದುಕಿನ ಅನುಭವದಿಂದಲೇ ರೂಪಗೊಂಡಿರುವದರಿಂದ ಅವು ಕವಿಯ ಕೃತಿಯಲ್ಲಿ ಪ್ರಕಟಗೊಳ್ಳುತ್ತವೆ. ಅದ ಕಾರಣ ಬದುಕಿನ ಶ್ರೇಯಸ್ಸನ್ನು ಸಾಧಿಸುವ ಈ ಮೌಲ್ಯ ಪ್ರಜ್ಞೆ ಕವಿಗೆ ಎಷ್ಟರ ಮಟ್ಟಿಗೆ ಇದೆಯೋ ಕವಿಯ ಕೃತಿ ಅಷ್ಟರಮಟ್ಟಿಗೆ ಬೆಲೆಯುಳ್ಳದ್ದಾಗುತ್ತದೆ. 'ಯಾರ ಕೃತಿ ಸರ್ವಕಾಲಿಕ ಸೊಗಸಿನ ಮೌಲ್ಯದ

---

೧ ಪಂಪನಲ್ಲಿ ಸಾಮಾಜಿಕ ಅರಿವು (ಪಂಪ ಒಂದು ಅಧ್ಯಯನ)
—ಎಚ್. ಎಸ್. ಚನ್ನಪ್ಪ

ತವನಿಧಿಯಾಗಿದೆಯೋ ಅಂಥ ಕವಿಯನ್ನು ಮಹಾಕವಿ ಎಂದು ಕರೆಯಬಹುದು."[೧]

ಪಂಪನದು ಕ್ಷಾತ್ರಯುಗ. ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತುಂಬ ಮೌಲ್ಯಗಳಿಂದ ಕೂಡಿದ್ದ ಕಾಲವದು. ಸ್ವತಃ ಪಂಪನು ಸುಸಂಸ್ಕೃತವಾದ ಪರಿಸರದಲ್ಲಿ ಬೆಳೆದುಬಂದದ್ದರಿಂದ ಬದುಕಿನ ಎಲ್ಲ ಮಗ್ಗಲುಗಳನ್ನು ಬಲ್ಲವನಾಗಿದ್ದ. ಹೀಗಾಗಿ ಅವನ ಕಾವ್ಯಗಳಲ್ಲಿ ಬದುಕಿನ ಮೌಲ್ಯವನ್ನು ಹೆಜ್ಜೆ ಹೆಜ್ಜೆಗೂ ಗುರುತಿಸಬಹುದಾಗಿದೆ. ಆತ ಬದುಕಿದ್ದು ಹತ್ತನೆಯ ಶತಮಾನವಾದರೂ ಇಂದಿನ ಇಪ್ಪತ್ತನೆಯ ಶತಮಾನಕ್ಕೂ ಸ್ಪಂದಿಸುವಂತಹ ಮೌಲ್ಯಪ್ರಜ್ಞೆ ಆತನಲಿದ್ದುದು ಗಮನಾರ್ಹ ಸಂಗತಿಯಾಗಿದೆ.

೩. ಬದುಕಿನ ಮೌಲ್ಯಗಳು

೧. ಲಲಿತಾಂಗಿಯರಿಂದ ಮುಕ್ತಿ ಸಂಸಾರಂ

ಪಂಪನು ಸಂಸಾರಸಾರೋದಯನಾದುದರಿಂದ ಬದುಕಿನ ಭೋಗ ಭಾಗ್ಯಗಳನ್ನು ಮನಸಾರ ಮೆಚ್ಚಿಕೊಂಡು ಅನುಭವಿಸಿದವನು. ಅವನಲ್ಲಿ ಭೋಗಿಯಾಗದೆ ತ್ಯಾಗಕ್ಕೆ ಅವಕಾಶವಿಲ್ಲ.

---

೧ ವಿಮರ್ಶೆಯ ಪೂರ್ವ ಪಶ್ಚಿಮ

ಡಾ. ಜಿ. ಎಸ್. ಶಿವರುದ್ರಪ್ಪ, ಪುಟ ೧೩೦

ಲೌಕಿಕ ಮತ್ತು ಪಾರಮಾರ್ಥ ಇವೆರಡು ಬದುಕೆಂಬ ತಕ್ಕಡಿಯ ಸಮಾನ ಪರಡಿಗಳಿದ್ದಂತೆ. "ಪ್ರಾಯದ ಪೆಂಪ್ರ ಪಂಪನಿಗೆ ಅಂಗೈ ಮೇಲಣ ನೆಲ್ಲಿಕಾಯಿ. ಕೇರಳಾಂಧ್ರ ವಧುಗಳಲ್ಲಿ ರಮಿಸಿದವನು. 'ಪಂಪನ ಅಭಿಪ್ರಾಯದಲ್ಲಿ ಹರೆಯದ ಹಿರಿಮೆಯನ್ನರಿತು ಭೋಗದ ರಾಮಣೀಯತೆಯನ್ನು ಅಸಾರವೆಂದು ಹಳಿಯದೆ ಅನುಭವಿಸಬೇಕು. ಹಾಗೆಂದು ಅದೇ ಅಮರವೆಂದು ಭ್ರಾಂತಿ ಇರಕೂಡದು. ಆದುದರಿಂದಲೇ ಪಂಪ ಭೋಗಕ್ಕೆ ಬೆನ್ನಾಗಬೇಕೆಂದು ಬೋಧಿಸಿದವನಲ್ಲ. ತಾನೇ ಸ್ವತಃ ತುಂಬು ಬಾಳನ್ನು ಎರಡೂ ಕೈಗಳಿಂದ ಬರಮಾಡಿಕೊಂಡವನು. ಅದರಂತೆ ಬಾಳಿದವನು. ಬಾಳು ಎಲ್ಲ ನಿಟ್ಟಿನಿಂದ ತುಂಬಿಕೊಂಡು ತೋರವಾಗಿ ಅರೆಕೊರೆಗಳಿಲ್ಲದೆ ತೋರಬೇಕು. ಅದಕ್ಕಾಗಿ ಸುಖಕ್ಕೆ ವಿಮುಖರಾಗಬೇಕಾಗಿಲ್ಲ. ರಾಗದಿಂದ ತುಸು ನಡೆದು ವಿರಾಗದಿಂದ ತುಸು ನಡೆದು ಎರಡನ್ನೂ ಸರಿದೂಗಿಸಿಕೊಂಡು ಇಲ್ಲಿ ಮೊದಲು ಸಂದು ತರುವಾಯ ಅವರು ವೈರಾಗ್ಯವನ್ನು ಚನ್ನಾಗಿ ತಿಳಿಯಲಾರರು"[೧] ಹೀಗೆ ಪಂಪ ಸಂಸಾರ ಸುಖವನ್ನು ಅಲ್ಲಗಳೆಯದೆ ಅದರ ಸಾರವನ್ನು ಸವಿಯುವದು ಒಂದು ಕರ್ತವ್ಯವೆಂಬ ಮನೋಭಾವನೆಯುಳ್ಳವನಾಗಿದ್ದ. " ಪಂಪ ಚಾರ್ವಾಕನೂ ಅಲ್ಲ. ನಾಸ್ತಿಕನೂ ಅಲ್ಲ; ಆದರೆ ಬದುಕಿನ ಬಗ್ಗೆ ಅಪಾರ ಪ್ರೀತಿ. ಕಾಳಜಿಯುಳ್ಳವನಾಗಿದ್ದ. ಬದುಕಿನಿಂದ ಓಡಿ ಹೋಗುವ 'ಪಲಾಯನವಾದಿ (escapist)ಯಲ್ಲ. ಅವನು ಸ್ವಯಂಬುದ್ಧೋಪದೇಶದ

---

೧ ಪಂಪ ಒಂದು ಅಧ್ಯಯನ–ಪಂಪನ ಜೀವನ ದೃಷ್ಟಿ

—ಲೇ. ಹಂಪ ನಾಗರಾಜಯ್ಯ

ಸಂದರ್ಭದಲ್ಲಿ ಮಹಾಬಲನ ಉಳಿದ ಮಂತ್ರಿಗಳಾದ ಮಹಾಮತಿ, ಸಂಭಿನ್ನಮತಿ, ಶತಮತಿಗಳು ಹೇಳುವ 'ಮಣ್ಣಿನ ಹಾಡು' ಅಥವಾ 'ಭೂಮಿಗೀತ', ಪಂಪನ ವಾಸ್ತವಿಕತೆಯ ಅರಿವಿನ ಕುರುಹಾಗಿದೆ. 'ಬಡಲೊಳ್ ಜೀವಮಿರ್ದಂಗಡಣಂಟಿಸುತಿರ್ಪುದು ಪುಣ್ಯಪಾಪಮಂ' 'ಸತ್ತನೆ ಮತ್ತೆ ಪುಟ್ಟುವಂಗಡ ಪುಸಿಕಾಣ' ಆದ್ದರಿಂದ 'ತಲೆವಱಿದು ಉಟ್ಟುದಿಕ್ಕಿ ಸುರಲೋಕ ಸುಖಂಗಳನುಣ್ಬೆವೆಂಬ ಬತ್ತಲಿಗರ ಮಾತುಗೊಳ್ಳದಿರು' 'ಬಾಟಿಸ್ಸಮಿಂದ್ರಿಯ ವರ್ಗದಿಚ್ಛೆಯಂ ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ನಿಚ್ಚತಂ ನಲಿವುದು ಕಂಡರಾರ್ ಮಱುಭವಂಗಳನಿಲ್ಲ' ಈ ಮಾತುಗಳನ್ನು ಪಂಪನೇ ಅವರ ಮೂಲಕ ಹೇಳುತ್ತಿದ್ದಾನೆ ಎಂದು ಹೇಳಲಾಗದಿದ್ದರೂ ಬಹುಶಃ ಪಂಪ ಇದನ್ನು ಅಲ್ಲಗಳೆಯಲಾರ. 'ಅಸ್ತಿತ್ವವಾದ' (Existentialism) ಹೆಚ್ಚು ಲಕ್ಷ್ಯ ಸೆಳೆಯುತ್ತಿರುವ ಈ ಯುಗದಲ್ಲಿ ಪಂಪನ ಮೇಲಿನ ಮಾತುಗಳನ್ನು ಪುನರಾಲೋಕಿಸುವುದು ಫಲದಾಯಕವಾದೀತು"೧ ಆದುದರಿಂದ ಪಂಪ ಪುರುಷಾರ್ಥಗಳಲ್ಲೊಂದಾದ ಕಾಮವನ್ನು ತಿರಸ್ಕಾರ ದೃಷ್ಟಿಯಿಂದ ಕಾಣಲಿಲ್ಲ. ಅದರ ಮಹತ್ವವನ್ನು ಕುರಿತು ಆದಿಪುರಾಣದಲ್ಲಿ 'ಧರ್ಮಂ ಪ್ರಧಾನಂ. ಅರ್ಥಂ ಧರ್ಮಾಂಘ್ರಿಪ ಫಳಂ ಅದರ್ಕೆ ರಸಮದುಕಾಮಂ' ಎಂದು ಸಾರಿದ್ದಾನೆ.

ಸಂಸಾರದ ಮಹತ್ವ. ಗಂಡಹೆಂಡಿರ ನಿಡುಬಾಳಿನೊಲವುಗಳನ್ನು ಕುರಿತು ಪಂಪ ತನ್ನ ಕೃತಿಗಳಲ್ಲಿ ಸಾಕಷ್ಟು ನಿದರ್ಶನಗಳನ್ನು

---

೧ ಪಂಪ ಒಂದು ಅಧ್ಯಯನ – ಆದಿ ಪುರಾಣದ ವಸ್ತು ವಿನ್ಯಾಸ, ಪ್ರೋ. ಎಂ.ವಿ. ಶ್ರೀನಿವಾಸಮೂರ್ತಿ

ಕೊಟ್ಟಿದ್ದಾನೆ. ಆದಿಪುರಾಣದಲ್ಲಿ ಒಂದು ಸನ್ನಿವೇಶ ಹೀ
ಬರುತ್ತದೆ. ಇಷ್ಟಸುಖಗಳನ್ನನುಭವಿಸುತ್ತಿದ್ದ ವಜ್ರಜಂಘ
ಶ್ರೀಮತಿಯರೆಂಬ ದಂಪತಿಗಳು ಒಂದು ದಿನ ಸೆಜ್ಜೆ ಮನೆಯಲ್ಲಿ
ಮಲಗಿರುವಾಗ ಆಳು ಧೂಪದ ಪಾತ್ರೆಯಲ್ಲಿ ಬೇಕಾದಷ್ಟು ಧೂ
ಹಾಕಿ ಕಿಟಕಿ ತೆರೆಯುವುದನ್ನು ಮರೆತು ಹೋಗಿರುವುದರಿಂ
ಹೊಗೆ ಸುತ್ತಿಕೊಂಡು ಉಸಿರುಗಟ್ಟಿ ಇಬ್ಬರೂ ಸತ್ತುಹೋದರೆಂ
ವಿವರಣೆ ಬರುತ್ತದೆ.

ಇಲ್ಲಿ ಸತಿಪತಿಗಳಿಗೆ ಬರುವ ಸಾವು ಒಡನೊಡನೆ ತೋಳತೆಕ್ಕೆ
ಯಲ್ಲಿರುವಂತೆಯೆ ಬಂದು ಬಿಟ್ಟಿತು. ಎಂಥ ಪುಣ್ಯದ ಸಾವ
ಎಂದು ಉದ್ಗರಿಸಿದ್ದಾನೆ. ಇಂತಹದೆ ಒಂದು ಪ
ವಿಕ್ರಮಾರ್ಜುನ ವಿಜಯದಲ್ಲಿಯೂ ಬರುತ್ತದೆ.

ಒಡನಳುರೆ ಕಿರ್ಚುತೋಳಂ
ಸಡಿಲಿಸದಾಪ್ರಾಣವಲ್ಲಭರ್ ಪ್ರಾಣಮಂ
ದೊಡಗಳೆದರೋಪರೋಪರೊ
ಳೊಡಸಾಯರ್ ಪಡೆದುದಿನ್ನು ಪುಣ್ಯಮನೆಂತೋ ?

ವಿ. ವಿ. ೫—೯

ಇಲ್ಲಿಯೂ ಪ್ರಿಯ ಪ್ರೇಯಸಿಯರನ್ನು ಉರಿಯು ಬಳ್ಳಿ
ಸುಡಲು ತಮ್ಮ ತೋಳುಗಳನ್ನು ಸಡಿಲಿಸದೆ ಜೊತೆಯಲ್ಲಿಯೆ
ಪ್ರಾಣ ಬಿಟ್ಟರು. ಪ್ರಿಯರು ಪ್ರಿಯರೊಡನೆ ಸಾಯುವ ಅದೃಷ್ಟ
ಪಡೆದರು. ಇದಕ್ಕಿಂತ ಬೇರೆ ಅದೃಷ್ಟ ಉಂಟೆ? ಎಂದು ಪ್ರಿ

ಜೊತೆ ಮರಣವನ್ನು ಮುಟ್ಟಿಹೋಗಿಳಿದ್ದಾನೆ. ಇದು ಪಂಪನು ಸತಿ ಪತಿಗಳ ಬಗ್ಗೆ ಇಟ್ಟುಕೊಂಡ ದೃಷ್ಟಿಕೋನವಾಗಿದೆ. ಪಂಪನಿಗೆ ಬದುಕು ದೊಡ್ಡದು. ಅದರ ಸಂಪೂರ್ಣ ಸದುಪಯೋಗ ಪಡೆಯಬೇಕೆಂಬುದೇ ಅವನ ಬಯಕೆ. 'ಸಾರಮನಂಗ ಜಂಗಮ ಲತಾಲಲಿತಾಂಗಿಯರಿಂದ ಮತ್ತೆ ಸಂಸಾರಂ'[1] ಎಂದು ಅದರ ಸಾರ್ಥಕತೆಯನ್ನು ಸಾರಿದ್ದಾನೆ. ಇವನ್ನುಳಿದು ಬದುಕಿನಲ್ಲಿ ಮತ್ತಾವುದಿದೆ 'ಪೆರತಾವುದು ಸಂಸಾರ ಸಾರಸರ್ವಸ್ವಫಲಂ' ಎಂದು ಸಂಸಾರದ ಪರಮಗೀತೆ ಹಾಡಿದ್ದಾನೆ.

೨. ಸೋದರ್ಯದಿಂದೊಳ್ಪಿತೇ ವಸುಧಾಮಂಡಳ

ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಸತಿ ಪತಿಗಳ ಸಾಮರಸ್ಯ ಎಷ್ಟು ಮುಖ್ಯವೋ **ಅಷ್ಟೇ** ಅಣ್ಣತಮ್ಮಂದಿರ ಸೋದರತ್ವದ ಭಾವವೂ ಮಹತ್ವದ ಅಂಶವಾಗಿದೆ. ಕುಟುಂಬವು ನಮ್ಮ ಸಾಮಾಜಿಕ ವ್ಯವಸ್ಥೆಯ ಒಂದು ಚಿಕ್ಕ ಘಟಕ. ಅದರ ಮಧುರವಾದ ಬಂಧುತ್ವವು ಸಮಾಜದ ಆರೋಗ್ಯಕರವಾದ ಬೆಳವಣಿಗೆಗೆ ಸಹಾಯಕಾರಿ. ಆದುದರಿಂದಲೆ ಪುರಾಣ ಮಹಾ ಭಾರತದಂತಹ ಕಥೆಗಳಲ್ಲಿ ಸೋದರಭಾವ ಹಾಸುಹೊಕ್ಕಾಗಿ ಬೆರೆತುಕೊಂಡು ಬಂದಿದೆ. ಪಂಪನ ವಿಕ್ರಮಾರ್ಜುನ ವಿಜಯವು ಲೌಕಿಕ ಕಾವ್ಯವಾಗಿರುವುದರಿಂದ ಈ ಸೋದರತ್ವದ ಭಾವವನ್ನು ವ್ಯಕ್ತಪಡಿಸಲು ಸಾಕಷ್ಟು ಅವಕಾಶದೊರೆತಿದೆ. ಆದಿ ಪುರಾಣದ ಭರತ--ಬಾಹುಬಲಿಯರ ಪ್ರಸಂಗದಲ್ಲಿಯೂ ಅದನ್ನು ಕಾಣಬಹುದಾಗಿದೆ. ಇಲ್ಲಿ ಬರುವ ಮಾತುಗಳು ಕುಟುಂಬ ಜೀವನದ ರಕ್ತ ಸಂಬಂಧಕ್ಕೆ ಆದರ್ಶಪ್ರಾಯವಾಗಿವೆ. ಪಂಪಭಾರತದ ಏಳನೆಯ ಆಶ್ವಾಸದಲ್ಲಿ ಬರುವ

---

೧ ವಿ.ವಿ. ೧-೧೧೪

ಒಂದು ಪ್ರಸಂಗದಿಂದ ಈ ಸೋದರತ್ವದ ಪ್ರೀತಿ. ವಾತ್ಸಲ್ಯಗಳನ್ನು ಎತ್ತಿತೋರಿಸಬಹುದಾಗಿದೆ. ದುರ್ಯೋಧನ ತನ್ನ ತಮ್ಮಂದಿರೊಂದಿಗೆ ಹಲವಾರು ನಾಯಕರನ್ನು ಕೂಡಿಕೊಂಡು ಬೇಟೆಯ ನೆಪದಿಂದ ಪಾಂಡವರಿಗೆ ಸಮೀಪವಾಗಿರುವ ಹಾಗೆ ದ್ವೈತವನದ ಪಕ್ಕದ ನಂದನವನದಲ್ಲಿ ಬೀಡುಬಿಡುತ್ತಾನೆ. 'ಹಗೆಯನ್ನು ಕೊಲ್ಲಲು ಬಂದವರ ಮೂಗನ್ನು ಕತ್ತರಿಸಿದರು' ಎಂಬಂತೆ ಚಿತ್ರಾಂಗದನೆಂಬ ಗಂಧರ್ವನು ತನ್ನ ಅರವತ್ತುಕೋಟಿ ಗಂಧರ್ವ ಸೈನ್ಯದೊಡನೆ ಬಂದು ದುರ್ಯೋಧನ ದುಶ್ಶಾಸನರಿಬ್ಬರನ್ನು ಆಕಾಶಮಾರ್ಗವಾಗಿ ಎತ್ತಿಕೊಂಡು ಹೋಗುತ್ತಾನೆ. ಆಗ ದುರ್ಯೋಧನನ ಮಹಾರಾಣಿ ಭಾನುಮತಿಯು ಅಳುತ್ತ ಅರಚುತ್ತ ಬಂದು ಧರ್ಮರಾಜನ ಕಾಲಿಗೆ ಬಿದ್ದು ಪುರುಷ ಭಿಕ್ಷೆಯನ್ನು ಬೇಡುತ್ತಾಳೆ. ಭಾನುಮತಿಯ ಗೋಳನ್ನು ಕೇಳಿ ಧರ್ಮರಾಜನ ಕರುಳು ಮಿಡಿಯುತ್ತದೆ. ಈ ಸಂದರ್ಭದಲ್ಲಿ ಭಾನುಮತಿಗೆ ಧರ್ಮರಾಯ ಹೀಗೆ ಹೇಳುತ್ತಾನೆ :

ಸುರಿಯಲ್ವೇಡ ಮದರ್ಕೆ ಬಾಷ್ಪಜಳಮಂ ನಿನ್ನಾಣ್ಮನಂ
ನಿನ್ನೊಳಿಂ
ದಿರದಾಂ ಕೂಡುವೆನೆಂದು ಬಂದ ಕಜ್ಜಕ್ಕಂತಾದೊಡಂ
ಕೇಳ ನೂ
ವರ್ಗೆ ದಲ್ ಕೌರವರಾವುಮಯ್ವರ್ ವಲಂ ಮತ್ತೊರ್ವ
ರೋಳ್ ತೊಟ್ಟು ಸಂ
ಗರರಂಗಕ್ಕೆ ಬಪ್ಪ ಕೂಡುವೆನೆಯೊಳ್ ನೂರ್ವರಾವ
ಲ್ವವೇ
ಪ. ಭಾ. ೭–೩೬

ನೀನು ಕಣ್ಣೀರು ಸುರಿಸಬೇಡ. ಯಾವ ವಿಳಂಬ ಮಾಡದೆ ನಿನ್ನ ಗಂಡನನ್ನು ಈ ದಿನವೇ ತಂದು ಕೊಡುತ್ತೇವೆ. ದುರ್ಯೋಧನ ನಮ್ಮ ಮೇಲೆ ದ್ವೇಷವುಳ್ಳವನಾಗಿದ್ದರೂ ನಾನು ಅದಕ್ಕೆ ಕೋಪಿಸಿ ಕೊಳ್ಳುವದಿಲ್ಲ. ನಾವು ಅವರು ಅಣ್ಣತಮ್ಮಂದಿರಲ್ಲವೆ? ಅವನಿಗಾದ ಅಪಮಾನ ನಮಗೂ ಆದಂತಲ್ಲವೆ? ನಮ್ಮ ಮನೆಯಲ್ಲಿ ಉಂಟಾದ ಜಗಳಕ್ಕೆ ಕೌರವರು ನೂರು ಜನ, ನಾವು ಐಯ್ದು ಜನ ಆದರೆ ಮತ್ತೊಬ್ಬರಲ್ಲಿ ಜಗಳ ಉಂಟಾದರೆ ನಾವು ನೂರೈದು ಜನರಲ್ಲವೆ?' ಎಂದು ಸೋದರತ್ವದ ಸಂಬಂಧದ ಹಿರಿಮೆಯನ್ನು ಎತ್ತಿ ಹಿಡಿಯುತ್ತಾನೆ.

ಕುರು ಪಾಂಡವರ ಕಲಹವನ್ನು ಕೊನೆಗಾಣಿಸಬೇಕೆಂದು ಶ್ರೀಕೃಷ್ಣನು ಸಂಧಾನದ ಮಾತುಕತೆಗಾಗಿ ಕುರುರಾಯನಲ್ಲಿಗೆ ಬಂದು ದುರ್ಯೋಧನನನ್ನು ಕುರಿತು ಪಾಂಡವರನ್ನು ಹೊರಗಿಟ್ಟು ನೀನು ಭೂಪತಿ (ಚಕ್ರವರ್ತಿ) ಯಾದರೆ ಒಪ್ಪುತ್ತದೆಯೆ? ಅವರೂ ನಿನ್ನ ಸಹೋದರರಲ್ಲವೆ? ಇದುವರೆಗೆ ಏನೋ ಮನಸ್ತಾಪದಿಂದ ಒಬ್ಬರನ್ನೊಬ್ಬರು ಅಗಲಿದ್ದೀರಿ ಇಷ್ಟೇ? ನಿಮಗೂ ಅವರಿಗೂ ಕ್ರೋಧವುಂಟೆ? ದುರ್ಯೋಧನ, ಕಾದ ಬಿಸಿನೀರು ಮನೆಯನ್ನು ಸುಡುವುದೆ? ಸುಮ್ಮನೆ ನಂಬಿಸಿ ಹೊಟ್ಟೆಹೊರೆಯುವ ಬೇದಿ ಹೋಕರ ಮಾತುಗಳನ್ನು ಕೇಳಬೇಡ. ನಿನ್ನ ಕಷ್ಟಸುಖಕ್ಕೆ ಪಾಂಡವರಾದಂತೆ ಇತರರಾಗುತ್ತಾರೆಯೇ?'.

(ವಿ.ವಿ. ೯–೪೨)

ಎಂದು ಹೇಳುವ ಮಾತಿನಲ್ಲಿ ಎಷ್ಟು ಸತ್ಯಾಂಶ ಅಡಗಿದೆ. ಚಾಡಿಕೋರ ಮಾತಿನಿಂದ ಮನೆತನದ ಒಗ್ಗಟ್ಟನ್ನು ಮೂರಾಬಟ್ಟೆ

ಮಾಡುವ ಜನ ಇಂದಿಗೂ ಇದ್ದಾರೆ. ಇದು ಎಷ್ಟು ವಸ್ತುನಿಷ್ಠ ಸತ್ಯವಾಗಿದೆ. ಇಂದು ಮಹಾಭಾರತ ಪಾತ್ರ ಇಲ್ಲ ಆದರೆ ಅಣ್ಣ-ತಮ್ಮಂದಿರರು ಇದ್ದಾರೆ. ಆ ಮಾತು ಇಂದಿಗೂ ಯಾವ ಅಣ್ಣ ತಮ್ಮಂದಿರರಿಗೂ ಅನ್ವಯಿಸುವ ಹಿತೋಪದೇಶವಾಗಿದೆ ಪ್ರಾಪಂಚಿಕ ಸುಖ ದುಃಖಗಳನ್ನು ಕಳಕಳಿಯಿಂದ ಅಣ್ಣ-ತಮ್ಮಂದಿರ ಹಂಚಿಕೊಳ್ಳುವಷ್ಟು ನೆರೆ ಹೊರೆಯುವರು ಹಂಚಿಕೊಳ್ಳಲಾರರು ಆದುದರಿಂದ ಅಣ್ಣತಮ್ಮಂದಿರು ತಮ್ಮಲ್ಲಿಯ ದ್ವೇಷ. ಅಸೂಯೆ ಜಗಳಗಳಿಂದ ಕಡು ವೈರತ್ವಕ್ಕೆ ಡೆಮಾಡಿಕೊಡದೆ ತಮ್ಮ ತಮ್ಮಲ್ಲಿಯೇ ಸಂಧಾನದ ಮೂಲಕ ಪರಿಹರಿಸಿಕೊಳ್ಳಬೇಕೆಂಬುದು ಇದರ ಸೂಚ್ಯಾರ್ಥ.

ದುರ್ಯೋಧನ ತನ್ನ ನೂರು ಜನ ತಮ್ಮಂದಿರನ್ನು ಕಳೆದು ಕೊಂಡಿದ್ದಾನೆ. ಈಗ ದುರ್ಯೋಧನ ಏಕಾಕಿ. ಧೃತರಾಷ್ಟ್ರ ಗಾಂಧಾರಿಯರು ಈ ಪ್ರಸಂಗದ ಭೀಕರತೆಯನ್ನು ಕಂಡು ಸಂಧಾನ ಒಡಂಬಡಿಕೆಗಾಗಿ ದುರ್ಯೋಧನನಲ್ಲಿ ಬಂದು ಕೇಳಿಕೊಳ್ಳುತ್ತಾರೆ ಅದಕ್ಕೆ ದುರ್ಯೋಧನ ಹೀಗೆ ಹೇಳುತ್ತಾನೆ. 'ನೀವು ಹೇಳಿದುದ ನನಗೆ ದೋಷವೇನಲ್ಲ. ಹೇಗೂ ಒಡಂಬಡತಕ್ಕುದೇ! ಆದ ಒಂದು ವಿಚಾರವಮಾತ್ರ. ದುಶ್ಶಾಸನನ ರಕ್ತಪಾನದಿಂದ ಸೊಕ್ಕಿರು ಪಾಪಿಯಾದ ಭೀಮನನ್ನು ಕೊಲ್ಲಿಸಿಕೊಂಡು ಈ ಯುದ್ಧರಂ ದಲ್ಲಿ ಬಲಿಯಿಕ್ಕುವವರೆಗೆ ಈ ಒಡಂಬಡಿಕೆಗೆ ಒಪ್ಪಲಾರೆ' ಎಂದಾ ಧೃತರಾಷ್ಟ್ರನು 'ದುರ್ಯೋಧನ ಧರ್ಮರಾಜನು ತನ್ನ ನಾಲ್ ಜನ ತಮ್ಮಂದಿರಲ್ಲಿ ಯಾರೊಬ್ಬರು ಸತ್ತರೂ ತಾನು ಸಾಯುತ್ತೇ ನೆಂದು ಪ್ರತಿಜ್ಞೆ ಮಾಡಿ ರಕ್ಷಿಸುತ್ತಿರುವಾಗ ಭೀಮನಿಗೆ ನಾಶವುಂ

ವರೆ ತಾನು ಬದುಕುತ್ತಾನಯೆ'? ಎಂದು ಪ್ರಶ್ನಿಸುವನು. ತಂದೆಯು ಈ ಮಾತಿಗೆ ದುರ್ಯೋಧನ

'......ಧರ್ಮಜ
ನನು ಜರ್ಕೆಳೆಳೆದರ್ಪನಟ್ಟಿದಾದರಾದನ ಜೀವ ಸುಯೋ
ಧನನಲ್ಲಿ ನೂರ್ವರುಂತೆ
ನ್ನನು ಜರ್ಕೆಳ್ ಸಾಯೆ ಬಾಳ್ದಂ ನಂಬಿಪಿರೇ

ಪಿ. ಪಿ. ೧೩–೧೬

ಎಂದು ಮಾರ್ಮಿಕವಾಗಿ ಕೊಡುವ ಉತ್ತರ ಸೋದರಕುಲಕ್ಕೆ ಆದರ್ಶಪ್ರಾಯವಾಗಿದೆ.

ಒಮ್ಮೆ ಕರ್ಣನ ತೇರಿನಗಾಲಿಗಳು ಇದ್ದಕ್ಕಿದ್ದಹಾಗೆ ಭೂಮಿಯಲ್ಲಿ ಹೂತು ಹೋದಾಗ ಕರ್ಣ ರಥದಿಂದಿಳಿದು ಗಾಲಿಯನ್ನು ಎತ್ತುತ್ತಿದ್ದನು. ಕೃಷ್ಣ ಇದೇ ಸಂದರ್ಭದಲ್ಲಿ ಅರ್ಜುನನಿಗೆ ಬಾಣ ಬಿಡಲು ಸೂಚಿಸಿ. 'ಈ ಸ್ಥಿತಿಯಲ್ಲಿ ಇವನನ್ನು (ಕರ್ಣನನ್ನು) ಕತ್ತರಿಸಿ ರಾಟೆ ಮಾಡದಿದ್ದರೆ ಮುಂದೆ ಇವನನ್ನು ಗೆಲ್ಲಲಾರೆ' ಎಂದು ಹೇಳಿದ ಕೃಷ್ಣನ ಮಾತಿಗೆ ಅರ್ಜುನ ಅಸಹ್ಯಪಟ್ಟು ಹೀಗೆ ಪ್ರಶ್ನಿಸುತ್ತಾನೆ. 'ನಿಸ್ಸಹಾಯಕನು, ಸಾರಥಿಯೂ ಇಲ್ಲ, ಶರೀರಕ್ಕೆ ಮರೆಯಾದ ಕವಚವೂ ಇಲ್ಲ. ಇಂಥವನಿಗೆ ಅದು ಹೇಗೆ ಹೊಡೆಯಲಿ?' ಇವು ಅರ್ಜುನನ ವೀರಗುಣಕ್ಕೆ ಮಾದರಿಯಾದ ಮಾತುಗಳಾದರೂ, ಕವಿಗೆ ಇದಕ್ಕಿಂತ ಮಿಗಿಲಾದ ಭಾತೃತ್ವ ಭಾವವನ್ನು ಎತ್ತಿ ತೋರಿಸಬೇಕಾಗಿದೆ. ''ಎನಿತಟ್ಟಿಯಿಂದಿದೊರ್ಡಂ ಸೋದರಿ

ಕೆಯೆ ಮಿಕ್ಕುಬರ್ಕುಮಪ್' ಎಂದು ಕೃಷ್ಣ ತನ್ನ ಮನಸ್ಸಿನಲ್ಲಿ ತಿಳಿದ ನೆಂದು ಹೇಳುವಲ್ಲಿ ಭಾತೃತ್ವದ ಬಲವಾದ ಬಂಧನವನ್ನು ಪಂಪ ಅರಿತವನಾಗಿದ್ದಾನೆ.

ದುರ್ಯೋಧನ ವೈಶಂಪಾಯನ ಸರೋವರದಲ್ಲಿ ಅಡಗಿ ಕುಳಿತಾಗ ಭೀಮನ ಗರ್ಜನೆಯಿಂದ ಹೊರಬರುತ್ತಾನೆ. ಹೊರ ಬಂದ ತಕ್ಷಣವೇ 'ತೋರಿಕೊಡಿ ನನಗೆ ಎದುರಾಗುವ ವೀರರನ್ನು' ಎಂದು ನುಡಿದಾಗ ಧರ್ಮರಾಯ ಹೀಗೆ ಹೇಳುತ್ತಾನೆ.– 'ದುರ್ಯೋಧನ, ಇನ್ನು ಮೇಲಾದರೂ ಕೋಪವನ್ನು ಬಿಟ್ಟುಬಿಡು. ಭೂಮಿಯನ್ನು ಭಾಗಮಾಡಿ ಆಳೋಣ. ಈ ದ್ವೇಷದಿಂದ ಏನು ಪ್ರಯೋಜನ? ನಾವು ಐಯ್ವು ಜನವೂ ನಿನಗೆ ಸೇವೆ ಮಾಡುತ್ತೇವೆ. ನೀನೇ ರಾಜ್ಯಭಾರಮಾಡು 'ಸೋದರ್ಯದಿಂದೊಳ್ಳಿತೇ ವಸುಧಾ-ಮಂಡಳಂ' 'ಸೋದರರಿಗಿಂತಲೂ ಹೆಚ್ಚಿನದೆ ಈ ನೆಲ'? ಎಂದು ಕೇಳುವಲ್ಲಿ. ಕವಿ ಸೋದರತ್ವದ ಮೌಲ್ಯ ಎತ್ತಿ ಹಿಡಿದಿದ್ದಾನೆ.

ಆದಿಪುರಾಣವು ಜಿನಧರ್ಮದ ಪ್ರತಿಪಾದನೆಗೆ ಮೀಸಲಾದ ಕಾವ್ಯವಾದರೂ ಸೋದರ ಸಂಬಂಧದ ಮಾತುಗಳನ್ನು ಅಲ್ಲಿಯೂ ಕಾಣಬಹುದಾಗಿದೆ. ಯಾವುದು ಜೀವನ ಮೌಲ್ಯವಾಗಿ ಕವಿಗೆ ಕಾಣುತ್ತದೆಯೋ, ಅದನ್ನು ಸಂದರ್ಭ ದೊರೆತಾಗ ಹೇಳದೆಬಿಟ್ಟಿಲ್ಲ. ಭರತ–ಬಾಹುಬಲಿಯರು ಅಣ್ಣತಮ್ಮಂದಿರರು ನಿಜ. ಆದರೆ ಅದು ಈಗ ಬಿರುಕು ಬಿಟ್ಟಿದೆ. ಇದಕ್ಕೆ ಕಾರಣ ಭರತನಿಗೆ ದೊರೆತ ಚಕ್ರರತ್ನ. ಆ ಚಕ್ರರತ್ನದ ಸಹಾಯದಿಂದ ಷಟ್ಖಂಡಗಳನ್ನೆಲ್ಲ ಗೆದ್ದುಕೊಂಡ ಭರತನಲ್ಲಿ ತನ್ನ ತಮ್ಮನನ್ನೂ ಸೋಲಿಸಬೇಕೆಂಬ

ಹೂಂಕಾರ ಹುಟ್ಟುತ್ತದೆ. ಈ ಕುರಿತು ಭರತ ಬಾಹುಬಲಿಗೆ ಹೇಳಿಯೂ ಕಳಿಸುತ್ತಾನೆ. ಆಗ ಬಾಹುಬಲಿ ಅಣ್ಣನ ಈ ಹುಚ್ಚುತನಕ್ಕೆ ಮನನೊಂದು 'ಅಣ್ಣನೆಂಬ ಅಕ್ಕರಿಕೆಯಿಂದ ಎರಗುವದಾದರೆ ಎರಗುತ್ತೇನೆ. 'ಕಿರಿಯಂಣಂಗೆಱಗುವುದೇಂ ಪರಿಭವವೇ' ಎನ್ನುತ್ತಾನೆ. ಬಾಹುಬಲಿಯ ಮೂಲಕ ಕವಿ ಅಣ್ಣನ ಬಗೆಗಿರುವ ಗೌರವಾದರವನ್ನು ಎತ್ತಿಹಿಡಿದಿದ್ದಾನೆ. ಆದರೆ ಅದೇ ಭಾವ ಅಣ್ಣನಾದ ಭರತನಲ್ಲಿ ಕಂಡುಬರಲಿಲ್ಲ. ಇದನ್ನರಿತ ಬಾಹುಬಲಿ ಯುದ್ಧಕ್ಕೆ ಸಿದ್ಧನಾದ. ದೃಷ್ಟಿಯುದ್ಧ, ಜಲಯುದ್ಧಗಳಲ್ಲಿ ಅಣ್ಣನಿಗೆ ಅಪಜಯವಾಯಿತು. ಇನ್ನು ಮಲ್ಲಯುದ್ಧದಲ್ಲಿ ಬಾಹುಬಲಿ ಭರತನನ್ನು ಹಿಡಿದೆತ್ತಿದರೂ ಹಿರಿಯಣ್ಣನೆಂಬ ಅಕ್ಕರತೆಯಿಂದ ಅವನನ್ನು ನೆಲಕ್ಕೆ ದೊಪ್ಪೆಂದು ಕೆಡವದೆ ಮೆಲ್ಲನೆ ಕೆಳಗಿಳಿಸಿದನು. ಈ ಸೋಲಿನ ಅಪಮಾನದಿಂದ ಮುನಿದ ಭರತ ತಮ್ಮನ ಮೇಲೆ ಚಕ್ರವನ್ನೇ ಪ್ರಯೋಗಿಸಿದ. ಆ ಚಕ್ರ ಬಾಹುಬಲಿಯನ್ನು ಘಾತಿಸದೆ ಪ್ರದಕ್ಷಿಣೆ ಮಾಡಿ ಪಕ್ಷದಲ್ಲಿ ನಿಂತಿತು. ಭರತ ನಾಚಿ ತಲೆತಗ್ಗಿಸಿನಿಂತನು. ಇದನ್ನು ಕಂಡು ಬಾಹುಬಲಿ 'ಅಣ್ಣನಲ್ಲಿ ದೊಡ್ಡ ಅವಿನಯವೆಸಗಿದೆನಲ್ಲಾ' ಎಂದು ಪಶ್ಚಾತ್ತಾಪಪಟ್ಟನು. 'ಸೋದರರೊಳ್ ಸೋದರರಂ ಕಾದಿಸುವ' ರಾಜ್ಯಬೇಡವೆಂದು ವೈರಾಗ್ಯ ಹೊಂದಿದನು. ಇಲ್ಲಿ ಅಣ್ಣತಮ್ಮಂದಿರಲ್ಲಿ ಜಗಳಕ್ಕೆ ಕಾರಣವಾದುದು ನೆಲ. ಈ ನೆಲವೇ ಅಣ್ಣತಮ್ಮಂದಿರ ಬಿರುಕಿಗೆ ಕಾರಣವಾಯಿತು. ಹಾಗಾದರೆ ಈ ನೆಲವೇ ಬೇಡ ಎನ್ನುವಲ್ಲಿ ನೆಲಕ್ಕಿಂತಲೂ ಅಣ್ಣತಮ್ಮಂದಿರ ಸಂಬಂಧ ಹೆಚ್ಚಿನದೆಂದು ಕವಿಗೆ ಹೇಳಬೇಕಾಗಿದೆ. ಇದನ್ನು ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾನೆ. ಪಂಪಭಾರತದಲ್ಲಿ

ಧರ್ಮರಾಯನ ಮೂಲಕವೂ ಇದೇ ಮಾತನ್ನು ಹೇಳಿಸಿದ್ದಾನೆ. (ಸೋದರ್ಯದಿಂದೊಳ್ಪಿತೇ ವಸುಧಾಮಂಡಳೆ) ಕವಿ ಪಂಪನು ಸೋದರತ್ವದ ಗಾಢ ಸಂಬಂಧ ಅರಿತವನಾದುದರಿಂದಲೇ ಅದನ್ನು ಮೇಲಿಂದಮೇಲೆ ಒತ್ತಿ ಹೇಳುತ್ತಾನೆ. ಸೋದರ ಬಾಂಧವ್ಯ ಮನುಷ್ಯಜೀವನಕ್ಕೆ ಅವಶ್ಯವೆಂಬುದು ಕವಿಯ ಅಂತರಾಳದ ಅನಿಸಿಕೆ.

೩. ಎನಗೆ ಕೆಳೆಯನ್ನೈ ರಾಧೇಯಾ

ಪಂಪ ಪ್ರತಿಪಾದಿಸಿದ ಬದುಕಿನ ಹಲವು ಮೌಲ್ಯಗಳಲ್ಲಿ ಸ್ನೇಹವೂ ಒಂದು. ಸ್ನೇಹ ಜೀವನದ ಸೌರಭವನ್ನು ತನ್ನ ಬದುಕಿನಲ್ಲಿ ಕಂಡುಕೊಂಡು ಅದರ ಶ್ರೇಷ್ಠತೆಯನ್ನು ಇತರರಿಗೂ ತೋರ್ಪಡಿಸಿದ್ದಾನೆ. ಪಂಪನ ದೃಷ್ಟಿಯಲ್ಲಿ ಸ್ನೇಹಜೀವನ ಬರಡಾದ ಬಾಳಿಗೆ ಅಮೃತದ ರಸಪಾನ. ಅದೊಂದು ಸಂಜೀವಿನಿ. "ಅವ್ಯಾಜವೂ ಅಹೇತುವೂ ಆದ ಆದರ್ಶ ಸ್ನೇಹವನ್ನು ದೊಡ್ಡದೆಂದು ಭಾವಿಸಿದವನು. ಅಂಥ ಸ್ನೇಹವನ್ನು ದುರ್ಯೋಧನ ಕರ್ಣರ ಅಪೂರ್ವ ಮೈತ್ರಿಯ ಮೂಲಕ ಪುಷ್ಟ–ಅರ್ಥ ತುಂಬಿದ್ದಾನೆ. ಅದರ ಮೂಲಕ ತನಗೂ ತನ್ನ ಆಶ್ರಯದಾತನಿಗೂ ಇದ್ದ ಕೆಳೆತನವನ್ನು ಚಿರಂತನಗೊಳಿಸಿದ್ದಾನೆ. ಮಹಾಭಾರತದಲ್ಲಿನ

ಸೆತ್ತಮನಾಡಿಭಾನುಮತಿ ಸೋಲ್ತೊಡೆ ಸೋಲಮನೀವು
ದೆಂದು ಕಾ
ಡುತ್ತಿರೆ ಲಂಬಮಂ ಪಿಡಿಯೆ ಮುತ್ತಿನ ಕೇಡನೆ ನೋಡಿ ನೋಡಿ
ಬಳ್ಕುತ್ತಿರೆ ಯೇವ ಮಾಳ್ಪುದಿನಾಯುಮ್ಮದೊ ತಪ್ಪದೆ ಪೇಳ್
ಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳ್ ಪೊಣರ್ಗೆ ಪೋದವಳ್ಗೆನೋ
ಪಂ.ಭಾ. ೯–೭೯

ಎಂಬ ಪದ್ಯವನ್ನು ಸೇರಿಸಿದ್ದಾನೆ. ಇದು ಪಂಪ ಪ್ರಾಸ್ತ್ಯವಾಡಿದ ಸೌಲ್ಯ. ಸ್ನೇಹಕ್ಕೆ ಕೊಟ್ಟ ಹೊಸ ಆಯಾಮ. ಕರ್ಣನ ಪಾತ್ರದ ಮೂಲಕ ಮಾನವ ಜನ್ಮಕ್ಕೆ ಸಾರ್ಥಕ್ಯ ತಂದು ಕೊಡುವ ಚಿರಸತ್ಯಗಳನ್ನು ಅವ್ಯಕ್ತವಾಗಿ ಹಿಡಿದಿದ್ದಾನೆ. ಎಂಥ ದಿಬ್ಬದಲ್ಲೂ ನ್ನತನ ತೋರದೆ ಇರಬಾರದೆಂಬ ದೃಷ್ಟಿಯು ಹೊಳೆಪು ಇಲ್ಲಿದೆ. ದದ ಸ್ಥಾನಪ್ರತಿಷ್ಠೆ ಅಂತಸ್ತುಗಳಿಗಿಂತ ಇಂಥ ಸ್ನೇಹವೆ ದೊಡ್ಡದು.[೧]

ಭೀಷ್ಮ ದ್ರೋಣಾದಿಗಳು ಕರ್ಣನ ಕುಲವೆತ್ತಿ ಹೀಗಳೆಯಲು ದುರ್ಯೋಧನ ಮಧ್ಯಪ್ರವೇಶಿಸಿ 'ಕುಲ ಕುಲವೆಂದು ಹೀಗಳೆಯುತ್ತೀರಿ. ಶೌರ್ಯವೇ ಕುಲವಲ್ಲವೇ ಕುಲವಿಂದಾದವೆ ಕೊಡದೊಳಂ ರಸ್ತ್ರಾಣದೊಳಂ' ಎಂದು ಕರ್ಣನ ಕುಲವನ್ನು ಎತ್ತಿಹಿಡಿದನು. ಇಷ್ಟಕ್ಕೆ ಬಿಡದೆ ಕರ್ಣನನ್ನು ಈಗಲೇ ಕುಲಜನನ್ನಾಗಿ ಮಾಡಿ ತೋರಿಸುತ್ತೇನೆ ಎಂದು ಅವನ ಕೈಯನ್ನು ಹಿಡಿದುಕೊಂಡು ಹೋಗಿ ಚಿನ್ನದ ಪೀಠದ ಮೇಲೆ ಕುಳ್ಳಿರಿಸಿ, ಚಿನ್ನದ ಕಳಶದಲ್ಲಿ ತುಂಬಿದ್ದ ಅಸಂಖ್ಯಾತ ಪುಣ್ಯತೀರ್ಥೋದಕಗಳಿಂದ ನಾಲ್ಕು ವೇದಗಳಲ್ಲಿ ಪ್ರವೀಣರಾದ ಪಂಡಿತರಿಂದ ಅಭಿಷೇಕಮಾಡಿಸಿ ಅಂಗ ರಾಜ್ಯದ ವೈಭವವನ್ನು ಸಂಪೂರ್ಣವಾಗಿ ಕೊಟ್ಟನು. ತನ್ನ ಸ್ನೇಹಕ್ಕಾಗಿ ಕರ್ಣನ ಕುಲವನ್ನು ಶೌರ್ಯವೇ ಕುಲವೆಂದು ಅರ್ಥೈಸಿ ಎಂದು ಉನ್ನತ ಅಧಿಕಾರಸ್ಥಾನ ಕೊಟ್ಟಿದ್ದು ಎಂತಹ ಆದರ್ಶ ಪ್ರಾಯ! ಇಂದಿನ ಜಾತಿ ಗೊಂದಲದಲ್ಲಿ ಪಂಪನ ಈ ಪ್ರಸಂಗ

---

೧ ಪಂಪ ಒಂದು ಅಧ್ಯಯನ –ಪಂಪನ ಜೀವನ ದೃಷ್ಟಿ
–ಪ್ರೊ. ಹಂಪ ನಾಗರಾಜಯ್ಯ

ಒಂದು ದಿಕ್ಕ್ನೂಚಿಯುಲ್ಲವೆ? ಕರ್ಣನನ್ನು ಕುಲಜನನ್ನಾಗಿ, ಅಂಗ ರಾಜ್ಯಾಧಿಪತಿಯನ್ನಾಗಿ ಮಾಡಿದ್ದು ದುರ್ಯೋಧನನಿಗೆ ಸಮಾಧಾನ ತಂದಿಲ್ಲ. ಅದಕ್ಕಿಂತ ಹೆಚ್ಚಾಗಿ ಕರ್ಣ ತನ್ನ ಸ್ನೇಹಿತನೆಂದು ಹೇಳಿಕೊಳ್ಳುವಲ್ಲಿ ತುಂಬ ಅಭಿಮಾನವಿದೆ. ಅದನ್ನು ಕವಿಯ ಮಾತಿನಲ್ಲಿಯೇ ಕೇಳಬೇಕು.

> ಪ್ರೊಡಮಡುವರ್ ಜೀಯೆಂಬರ್
> ಕುಡು ದಯುಗೆಯ್ಯೆಂ ಪ್ರಸಾದಮೆಂಬಿವು ಪೆಱರೊಳ್
> ನಡೆಗೆಮ್ಮ ನಿನ್ನಯೆಡೆಯೊಳ್
> ನಡೆಯಲ್ವೇಡೆನಗೆ ಕೆಳೆಯನ್ಪರಾಧೇಯಾ
>
> ಪಿ. ಪಿ. ೨—೮

'ನಮಸ್ಕರಿಸುವುದು, ಜೀ ಎಂಬುದು ದಯಪಾಲಿಸಿಯೆಂಬುದು ಇವೆಲ್ಲ ಇತರರಲ್ಲಿ ನಡೆಯಲಿ: ಆದರೆ ನನ್ನ ನಿನ್ನ ವ್ಯವಹಾರದಲ್ಲಿ ಬೇಡ, ಯಾಕೆಂದರೆ ನೀನು ನನಗೆ ಸ್ನೇಹಿತನು ಮಾತ್ರನಾಗಿರುತ್ತೀಯೆ ಎಂದು ಹೇಳುವಲ್ಲಿ ಗೆಳೆತನದ ಬಗ್ಗೆ ಹೊಂದಿದ್ದ ಆದರ ಕಳಕಳಿ ಎತ್ತಿತೋರಿದೆ.

ಕರ್ಣಾವಸಾನದ ಪ್ರಸಂಗದಲ್ಲಿಯೂ ಕರ್ಣ–ದುರ್ಯೋಧನರ ಗೆಳೆತನ ಕಳೆಗಟ್ಟಿನಿಂತಿದೆ. ಕರ್ಣನ ಕಳೇಬರವನ್ನು ಕಂಡು ದುಃಖಿಸುವ ದುರ್ಯೋಧನನ ಮಾತಿನಲ್ಲಿ ಕರ್ಣ–ದುರ್ಯೋಧನರ ಸ್ನೇಹ ವ್ಯಕ್ತವಾಗಿರುವ ಬಗೆ ಇದು:

ನೀನು ಪಂಗಲ್ದೆ ಯೆನ್ನನಗೆ ಪೇಟ್ ಪಜಿರಾರೆನಗಾಸೆ ನಿನ್ನನಿ
ನ್ನಾನುಪಂಗಲ್ತ್ತಿನೇ ಕೆಳಿಯು ಚೆನ್ನನ ಬಂದಪೆನಾಂತರಂ ಯುಮು
ಸ್ಥಾನಮುನೆಯ್ದು ಸುತ್ತಿದುವೆ ದಂದುಗ ಮೊಂತೆರ್ದೆ ಮುಟ್ಟಿ
ಕೂತ್ತಪೇಟ್
ಮಾನಸ ವಾ ಟಿನಂಗಪಿಪಂಯಾಧಿಪ ನೀಂ ಪ್ರೋಆಗಾಗೆ
ಬಾಟ್ಟನೇ
ವಿ. ಪಿ. ೧೩–೩

ರ್ಣನನ್ನು ನೆನದ ಮಾತ್ರಕ್ಕೆ ದುಃಖ ಸಮುದ್ರವು ದಡವನ್ನು ಂರಿ ಸೈರಿಸಲಾರದೆ—ನೀನೂ ನನ್ನನ್ನು ಅಗಲಿಹೋದೆ. ನನಗೆ ನೆಯಾಗಿರುವವರು ಬೇರೆ ಯಾರು ? ನಿನ್ನನ್ನು ಬಿಟ್ಟು ನಾನು ರಬಲ್ಲೆನೇ? ಸ್ನೇಹಿತನ ಪ್ರತಿಭಟಿಸಿದವರನ್ನು ಯಮನ ಮನೆಗೆ ಳಿಸುತ್ತ ನಿನ್ನ ಬೆನ್ನ ಹಿಂದೆಯೇ ಬರುತ್ತೇನೆ, ಇದೇ ನನಗಿರುವ ರ್ಣವ್ಯ. ಹೃದಯಾಂತರಾಳದಿಂದ ಪ್ರೀತಿಸಿದ ನೀನು ಅಗಲಿದ ೀಲೆ ಕರ್ಣ, ನಾನು ಮನುಷ್ಯ ಜೀವನವನ್ನು ಬಾಳಬಲ್ಲೆನೆ? ಲ್ಲಿಯುವರೆಗೆ ಲೋಕದ ಜನರು ದುರ್ಯೋಧನ ಕರ್ಣರಲ್ಲಿ ರಡು ಶರೀರ ಆದರೆ ಪ್ರಾಣಮಾತ್ರ ಒಂದೆ ಎಂದು ಹೇಳುತ್ತಿದ್ದರು. ಗ ಆ ನುಡಿ ಸುಳ್ಳಾಯಿತಲ್ಲ ! ಪಾಂಡವರಲ್ಲಿ ನೀನು ಹುಟ್ಟಿದ ನಾಗಿರುವದರಿಂದ ನಾನು ದೊರೆತನ ನಿನಗೇಕೆ ಕೊಡಲಿಲ್ಲ? ನಿನಗೆ ೀಯಪಡಿಸುವದಕ್ಕೂ ಇಷ್ಟಪಡಲಿಲ್ಲ. ಸ್ವಕಾರ್ಯಸಾಧನೆಗಾಗಿ ೀತಿಸುವ ಹಾಗೆ ನಟಿಸಿ ಪಾಂಡವರ ಮೇಲಿನ ಕೋಪದಿಂದ ನ್ನನ್ನು ನಾನೇ ಕೊಂದೆ. ಈ ಪ್ರಕಾರ ಕವಿ ದುರ್ಯೋಧನ ತ್ತ ಕರ್ಣರ ಸ್ನೇಹ ಸಂಬಂಧವನ್ನು ಲೋಕಕ್ಕೆ ಆದರ್ಶವನ್ನುವ

ಹಾಗೆ ಚಿತ್ರಿಸಿದ್ದಾನೆ. ಪಂಪ ಚಿತ್ರಿಸಿದ ಸ್ನೇಹಾತಿಶಯದಲ್ಲಿ ಕೃತ್ರಿಮತೆಯಿಲ್ಲ, ತನ್ನ ಜೀವನದಲ್ಲಿ ಅಳವಡಿಸಿಕೊಂಡ. ಅದರಂತೆ ನಡೆದ, ತನ್ಮೂಲಕ ಉಕ್ಕಿಬಂದ ನೈಜ ಚಿತ್ರಣವಾಗಿದೆ.

೪. ಮನುಷ್ಯಜಾತಿ ತಾನೊಂದೆ ವಲಂ

ಜಾತಿಭೇದ, ವರ್ಣಭೇದಗಳು ಮಾನವ ಜನಾಂಗಕ್ಕೊಂದು ದೊಡ್ಡ ಶಾಪ. ಇವು ಮನುಷ್ಯನ ಹುಟ್ಟಿನೊಂದಿಗೆ ಪ್ರಾರಂಭವಾದವೇನೋ ಎನ್ನುವಷ್ಟರ ಮಟ್ಟಿಗೆ ಇದರ ಬೇರುಗಳು ಅಷ್ಟು ಆಳಕ್ಕಿಳಿದು ಬಿಟ್ಟಿವೆ. ಕಾಲಾನುಕ್ರಮದಲ್ಲಿ ಇದರ ಬೇರುಗಳನ್ನು ಕತ್ತರಿಸಿ ಹಾಕುತ್ತಿದ್ದರೂ ಮತ್ತೊಂದೆಡೆ ಚಿಗುರಿ ಬೆಳೆದು ತನ್ನ ಕ್ರೂರವಾದ ಟೊಂಗೆಗಳನ್ನು ಎತ್ತಲೂ ಪಸರಿಸಿ ಬಿಡುತ್ತಿದೆ. ಇದರ ಘೋರತೆಯನ್ನರಿತ ಕನ್ನಡನಾಡಿನ ಶರಣರು ಎಂಟುನೂರು ವರ್ಷಗಳ ಹಿಂದೆಯೇ ಅದರ ಸರ್ವನಾಶಕ್ಕೆ ಕಂಕಣಬದ್ಧರಾಗಿ ನಿಂತು. ಒಂದು ವ್ಯವಸ್ಥಿತ ಆಂದೋಲನವನ್ನೇ ಪ್ರಾರಂಭಿಸಿ ಕಾರ್ಯಪ್ರವೃತ್ತರಾದದ್ದು ಇತಿಹಾಸ ಪ್ರಸಿದ್ಧ ಮಾತಾಗಿದೆ. ಅನಂತರ ಉತ್ತರಾಧಿಕಾರತ್ವವನ್ನು ಸಮರ್ಥ ರೀತಿಯಲ್ಲಿ ಯಾರೂ ಮುಂದುವರಿಸಿಕೊಂಡು ಬರಲಿಲ್ಲ. ಹೀಗಾಗಿ ಮತ್ತೆ ಈ ಸಮಸ್ಯೆ ಕಾಣಿಸಿಕೊಂಡಿದ್ದು ಮಾನವ ಜನಾಂಗದ ದುರ್ದೈವ. ಧರ್ಮಕ್ಕೆಟ್ಟು ಜಾತಿಯಾಗುವುದು, ವೃತ್ತಿಶರಣರ ಪೂರ್ವದ ಪಂಪನ ಕಾಲದಲ್ಲಿ ಈ ಜಾತಿ ವೈಷಮ್ಯ ಇನ್ನು ವಿಪರೀತವಾಗಿರಬೇಕು. ಬೆಳೆದು ಜಾತಿಯವನಾಗುವುದು ಅವ್ವಗಳ ದುರ್ದೈವ. ಮಾನವ ಜನಾಂಗಕ್ಕೆ ಬೆನ್ನುಬಿಡದ ಒಂದು ದೊಡ್ಡ ಶಾಪವಾಗಿರುವ ಈ

ಜಾತಿ ಕಲಹದ ಧ್ವನಿ ವ್ಯಾಸಭಾರತಕ್ಕಿಂತ ಪಂಪಭಾರತದಲ್ಲಿ ಹೆಚ್ಚು ಸ್ಪಷ್ಟವಾಗಿ ಕೇಳಿಸುತ್ತದೆ. ಬ್ರಾಹ್ಮಣ್ಯದ ಪರವಾಗಿ ದ್ರೋಣ, ಅಶ್ವತ್ಥಾಮ, ಕ್ಷತ್ರಿಯ ಪರವಾಗಿ ದುರ್ಯೋಧನ–ಶಲ್ಯ, ಶೂದ್ರ ಪರವಾಗಿ ಕರ್ಣ ನಿಂತು ಪರಸ್ಪರ ಕುಲಗಳನ್ನು ಅವಹೇಳನಗೆಯ್ಯು ವುದು ಪಂಪನ ಕಾಲದ ಜಾತಿಗೊಂದಲದ ಚಿತ್ರವಾಗಿದೆ. 'ನಿಜದೊಳ್ ಮೂಪರೆಂಬರವಿವೇಕಿಗಳ್' ಎಂದು ಬ್ರಾಹ್ಮಣನು ಕ್ಷತ್ರಿಯನನ್ನು, 'ಕುಲಮಿರ್ದುದೆ.....ಕೊಡದೊಳಂ ಶರಸ್ತಂಬದೊಳಂ' ಎಂದು ಕ್ಷತ್ರಿಯನು ಬ್ರಾಹ್ಮಣನನ್ನು 'ಏನಿತಳವುಳ್ಳೊಡಂ ದ್ವಿಜನ ಗಂಡ ಮನಾಕ್ರಾಗಿವನ್ನರಾವನೊ' ಎಂದು ಶೂದ್ರನು ಬ್ರಾಹ್ಮಣನನ್ನು, 'ಕಾಲಗೆ ಕುಲಮುಂ ತುಟ್ಟಿಪವ್ರೋಲ್' ಎಂದು ಬ್ರಾಹ್ಮಣನು ಶೂದ್ರನನ್ನು ನಿಂತ ನಿಂತಲ್ಲಿ ಹೀಯಾಳಿಸುವುದು ಪಂಪಭಾರತದಲ್ಲಿ ಪದೇ ಪದೇ ನಡದಿದೆ. ಅದರಲ್ಲಿಯೂ ಶೂದ್ರನಿಂದೆಯ ಹೊಣೆಯನ್ನು ತಂದೆಯ ತರುವಾಯ ಮಗ ಮುಂದುವರಿಸುವ ರೀತಿಯಲ್ಲಿ ಕರ್ಣನ ಅವಹೇಳನೆಯ ಕಾರ್ಯವನ್ನು ದ್ರೋಣರ ಮರಣಾನಂತರ ಅಶ್ವತ್ಥಾಮನು ಮುಂದುವರಿಸಿದುದು ಆ ಕಾಲದ ಬ್ರಾಹ್ಮಣ ಮತ್ತು ಶೂದ್ರಜಾತಿಗಳ ಕಲಹ ತೀವ್ರತೆಯನ್ನು ಸೂಚಿಸುತ್ತದೆ"[೧] ಈ ಆರಂಭದಿಂದ ಯುಗಪುರುಷರು, ದಾರ್ಶನಿಕರು, ವಿಶ್ವವಿಭೂತಿ ಪುರುಷರು, ಇದರ ನಿರ್ಮೂಲನೆಗಾಗಿ ಹೋರಾಟ ನಡೆಸಿದರೂ ಫಲ ಪ್ರದವಾಗಿಲ್ಲ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಇದೊಂದು ಜ್ವಲಂತ ಸಮಸ್ಯೆಯಾಗಿ ಉಳಿದುಕೊಂಡು ಪ್ರಗತಿಗೆ ಮಾರಕವಾಗಿ

---

೧ ಪಂಪ ಒಂದು ಅಧ್ಯಯನ–ಪಂಪನ ಜಾತಿಯಾಗಿಕ–ಧಾರ್ಮಿಕ ಒಸ್ಕೆಲಿ
ಎಂ. ಎಂ. ಕಲಬುರ್ಗಿ

ರುವಂತೆ, ಅಂದೂ ಸಮಸ್ಯೆಯಾಗಿತ್ತೆಂಬುದು ಪಂಪನ ಕಾವ್ಯಗಳನ್ನು ಗಮನಿಸಿದಾಗ ಗೊತ್ತಾಗುತ್ತದೆ. ಪಂಪಕವಿ ಜಾತಿವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಸಂದರ್ಭ ಸಿಕ್ಕಾಗ ಅದನ್ನು ಕಟುವಾಗಿ ಖಂಡಿಸುವದರೊಂದಿಗೆ, ನಿಜವಾದ ಜಾತಿಯಾವುದು ಎಂಬುದನ್ನು ಸೂಚಿಸಿದ್ದಾನೆ.

ಒಮ್ಮೆ ಕುರು ಪಾಂಡವರಲ್ಲಿ ಅಸ್ತ್ರವಿದ್ಯಾಪ್ರೌಢಿಮೆಯ ಪ್ರದರ್ಶನ ನಡೆದಾಗ ದ್ರೋಣರು ಕರ್ಣನನ್ನು ಕುರಿತು– 'ನಿನ್ನ ತಾಯಿ ತಂದೆಯ ವಿಷಯವನ್ನು ವಿಚಾರಿಸಿ, ಮಾತನಾಡುವುದಾದರೆ ನಿನಗೂ ಅರಿಕೇಸರಿಗೂ (ಅರ್ಜುನ) ಯಾವ ಸಮಾನತೆಯಿದೆ ಎಂದು ಕುಲದ ಮಾತೆತ್ತಿ ಹೀನಾಯವಾಗಿ ನುಡಿಯುತ್ತಾರೆ. ಇದಕ್ಕೆ ಪ್ರತ್ಯುತ್ತರ ಕೊಡದೆ ಕರ್ಣ ಬೆವೆತು ನಿಸ್ಸಹಾಯಕನಾಗಿ ನಿಲ್ಲುತ್ತಾನೆ. ಆದರೆ ಈ ಪ್ರಸಂಗ ಕಡೆಗೂ ಸಹಿಸಲಸಾಧ್ಯವಾಗಿದೆ. ನಿಜವಾದ ಕುಲದನೆಲೆ ತಿಳುಹಿ ಕೊಡಬೇಕೆಂದು ದುರ್ಯೋಧನನ ಮೂಲಕ ಈ ಮಾತುಗಳನ್ನು ನುಡಿಸುತ್ತಾನೆ.

ಕುಲಮೆಂಬುದುಂಟೆ ಬೀರಮೆ
ಕುಲಮಿಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ
ಮೊಲಿದಲ್ಲಿ ಪುಟ್ಟಿ ಬಳೆದಿರೊ
ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ

ವಿ. ವಿ. ೨-೮೩

ಪಂಪನ ಯುಗಧರ್ಮದ ಧ್ವನಿ ವೀರಗುಣವಾಗಿತ್ತು. ವೀರತನ ವೊಂದಿದ್ದರೆ ನಾಕು ಕುಲದವರೆಲ್ಲರೂ ಗೌರವಾಗಿತ್ತು. ಹೀಗಾಗಿ

ಶೂರನಲ್ಲಿ ಕುಲವನರಸುವುದೆ?' ಎಂದು ದುರ್ಯೋಧನನ ಮೂಲಕ ಕವಿ ಕರ್ಣನ ಕುಲಕ್ಕಂಟಿದ ದೋಷವನ್ನು ಕಿತ್ತೊಗೆದು ಕುಲಜನನ್ನಾಗಿ ಮಾಡಿದ್ದಾನೆ.

ಭೀಷ್ಮರಿಗೆ ವೀರಪಟ್ಟಗಟ್ಟುವ ಸಂದರ್ಭದಲ್ಲಿ ಅದನ್ನು ವಿರೋಧಿಸುತ್ತಿದ್ದ ಕರ್ಣನನ್ನು ದ್ರೋಣರು ಸತ್ಕುಲ ಪ್ರಸೂತರಾದವರನ್ನು ಶ್ರೇಷ್ಠರಾದವರನ್ನು ಎಲ್ಲರಿಗೂ ಹಿತರಾದವರನ್ನು ಕುರಿತು ಈ ಸಭಾ ಮಧ್ಯದಲ್ಲಿ ಹೆಚ್ಚಿದ ಕೊಬ್ಬಿನಿಂದ ನೀನು ನಿಷ್ಪ್ರಯೋಜಕವಾಗಿ ತಿರಸ್ಕಾರದಿಂದ ಮಾತನಾಡಿದ್ದೀಯೆ. ಕುಲವನ್ನು ನಾಲಗೆ ಆಡಿ ತೋರಿಸುತ್ತದೆಯಲ್ಲವೆ?' ಎಂದು ಮೂದಲಿಸುವರು. ಇಲ್ಲಿ ಕರ್ಣ ಮತ್ತೆ ಕುಲದ ಸಮಸ್ಯೆಯನ್ನೆದುರಿಸಬೇಕಾಯಿತು. ಈ ಮೊದಲು ಇದಕ್ಕೆ ದುರ್ಯೋಧನ ಪ್ರತಿಭಟನೆ ಸಲ್ಲಿಸಿ 'ವೀರನಾದನ ಕುಲವನರಸುವರೆ?' ಎಂದು ಉತ್ತರಿಸಿದ್ದ. ಈಗ ಅದನ್ನು ಪ್ರತಿಭಟಿಸುವ ಶಕ್ತಿ ಕರ್ಣನಲ್ಲಿಯೇ ಬಂದಿದೆ. ದ್ರೋಣರಾಡಿದ ಕರ್ಕಶ ಮಾತುಗಳಿಗೆ ಕೋಪಿಸಿಕೊಂಡ ಕರ್ಣ ಕೆಂಡವಾಗಿ ಈ ರೀತಿಯಾಗಿ ಕುಲದ ನಿಜವಾದ ಅರ್ಥ ಹೇಳುತ್ತಾನೆ.

ಕುಲಮನೆ ಮುನ್ನ ಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂ
ತ ಮಾ
ರ್ಕೊಲೆವನನಟ್ಟಿ ತಿಂಬನೆ ಕುಲಂಕುಲಮಲ್ತು ಚಲಂ
ಕುಲಂ ಗುಣಂ
ಕುಲಮಭಿಮಾನಮೊಂದೆ ಕುಲ ಮಣ್ಮುಕುಲಂ ಬಗೆವಾಗ
ಳೀಗಳೀ
ಕಲಹದೊಳೆನ್ನ ನಿಮ್ಮ ಕುಲಮಾಕುಲಮಂ ನಿಮಗುಂಟು
ಮಾಡುಗುಂ
ಪ. ಭಾ. ೧೦–೨೧

ಮಾತಿಗೆ ಮೊದಲು ಕುಲವನ್ನೇ ಏಕೆ ಘೋಷಿಸುತ್ತೀರಿ? ನಿಮ್ಮ ಕುಲಗಳು ಪ್ರತಿಭಟಿಸಿದವರನ್ನು ವಿದಾರಿಸಿ ಹಿಂಬಾಲಿಸಿ ತಿಂದು ಹಾಕುತ್ತವೆಯೆ? ಹುಟ್ಟಿದ ಜಾತಿ ನಿಜವಾದ ಕುಲವಲ್ಲ–ಛಲ ಕುಲ. ಸದ್ಗುಣ ಕುಲ. ಆತ್ಮಗೌರವವೊಂದೆ ಕುಲ. ಪರಾಕ್ರಮವೆಂಬುದು ಕುಲ. ನಿಮ್ಮ ಈ ಕುಲಗಳು ನಿಮಗೆ ವ್ಯಥೆಯನ್ನುಂಟು ಮಾಡುತ್ತವೆ. ಈ ರೀತಿಯಾಗಿ ಕರ್ಣನಲ್ಲಿ ಕವಿ ತನ್ನ ಆಕ್ರೋಶ ತುಂಬಿ ಕುಲದ ಅರ್ಥವಿವರಣೆಯನ್ನು ವಿಧವಿಧವಾಗಿ ವಿಶಾಲಾರ್ಥದಲ್ಲಿ ವಿಂಗಡಿಸಿ ಹೇಳಿದ್ದಾನೆ. ಈ ಕುಲದ ಬಗ್ಗೆ ಕರ್ಣನಿಗಾದ ವ್ಯಥೆ ಕವಿಯ ವ್ಯಥೆಯಾಗಿದೆ. ಮೊದಮೊದಲು 'ಜಿನೇಂದ್ರ ಧರ್ಮವೆ ವಲಂ' ಎಂದು ನುಡಿದ ಪಂಪ. ಬರುಬರುತ್ತ ಈ ಜಾತಿ ಸಂಕೋಲೆಯಿಂದ ಮುಕ್ತನಾಗಿ ಮಾನವೀಯತೆಯತ್ತ ಸಾಗಿ 'ಮನುಷ್ಯಜಾತಿ ತಾನೊಂದೆ ವಲಂ' ಎಂದು ಹೇಳಿ, ವಿಶ್ವಮಾನ್ಯಮೌಲ್ಯ ಎತ್ತಿ ಹಿಡಿದಿದ್ದಾನೆ. ಪಂಪ ಜಾತಿಯ ವಿರೋಧವಾಗಿ ಎತ್ತಿದ ಧ್ವನಿ ಮುಂದೆ ಬಸವಣ್ಣನ ಕಾಲಕ್ಕೆ ಗಟ್ಟಿಗೊಂಡು ಆಂದೋಲನವೇ ಪ್ರಾರಂಭವಾಯಿತು. ಪಂಪ ಮತ್ತು ಬಸವಣ್ಣ ಇಬ್ಬರು ಮೂಲ ಪ್ರವರ್ತಕ ಮಾನವತಾವಾದರೆಂಬುದು ಗಮನಾರ್ಹ ಸಂಗತಿಯಾಗಿದೆ.

೫. ಸೆಱೆಗೊಂಡನೀವೆನೆಂದನೆ

ಪಂಪ ಭೋಗ ಜೀವನದ ಚಿತ್ರಣವನ್ನು ಎತ್ತಿ ಹಿಡಿದಂತೆ, ತ್ಯಾಗ ಜೀವನದ ಮಹಿಮೆಯನ್ನು ಅರಿತವನಾಗಿದ್ದ. ಭೋಗ–ತ್ಯಾಗಗಳು ನಾಣ್ಯದ ಎರಡು ಮುಖಗಳಲ್ಲಿ ಹೇಗೋ ಹಾಗೆ ಬದುಕಿನಲ್ಲಿಯೂ ಬೇಕು. ತ್ಯಾಗವಿಲ್ಲದ ಭೋಗ ಪರಿಮಳವಿಲ್ಲದ ಪುಷ್ಪದಂತೆ.

ಕ್ರಮಾರ್ಜುನ ವಿಜಯದಲ್ಲಿ ಮನುಷ್ಯನಾದವನಿಗೆ ಅವಶ್ಯಕವಾಗಿ ೇಕಾದ ಗುಣಗಳನ್ನು ಕುರಿತು ಹೇಳುವ ಒಂದು ಪದ್ಯ ಬರುತ್ತದೆ.[೧] ದರಲ್ಲಿ ಈ ತ್ಯಾಗಕ್ಕೆ ಪ್ರಥಮ ಸ್ಥಾನ ಕೊಟ್ಟಿದ್ದಾನೆ. ತನ್ನ ಾರತದಲ್ಲಿ ಬರುವ ಕೆಲ ಪಾತ್ರಗಳ ಮೂಲಕ, ಸನ್ನಿವೇಶಗಳ ಮೂಲಕ ಅದರ ಅವಶ್ಯಕತೆಯನ್ನು ಎತ್ತಿ ತೋರಿಸಿದ್ದಾನೆ. ತ್ಯಾಗ ಎಷ್ಟು ಕನ್ನಡಿಗರ ಬಾಳಿನ ಮಹಾಮಾರ್ಗವೇ ಆಗಿತ್ತೆಂಬುದು ಶಾಸನ ತ್ತು ಕಾವ್ಯಗಳಿಂದ ತಿಳಿದುಬರುತ್ತದೆ. ವಿಕ್ರಮಾರ್ಜುನ ಜಯದಲ್ಲಿ ತ್ಯಾಗದ ಶ್ರೇಷ್ಠತೆಯನ್ನು ಹೇಳಲು ಕರ್ಣನ ಪಾತ್ರ ನ್ನೇ ಮೀಸಲಾಗಿಟ್ಟಿದ್ದಾನೆ. ಇಡೀ ಭಾರತದಲ್ಲಿ ಕರ್ಣ ತ್ಯಾಗ ಮೂರ್ತಿಯಾಗಿ ಕಂಗೊಳಿಸಿದ್ದಾನೆ.

ಒಮ್ಮೆ ಇಂದ್ರನು ಕರ್ಣನ ತ್ಯಾಗ, ಶೌರ್ಯ, ಸಾಹಸ ಕೇಳಿ ಮುಂದೆ ತನ್ನ ವಂಶದಲ್ಲಿ ಹುಟ್ಟುವ ಅರ್ಜುನನಿಗೂ ಈತನಿಗೂ ಯುದ್ಧವುಂಟಾದರೆ ಆಗ ಅರ್ಜುನನಿಗೆ–ಗೆಲ್ಲಲಾಗುವದಿಲ್ಲ, ಎಂದು ನ್ನ ದಿವ್ಯಜ್ಞಾನದಿಂದ ತಿಳಿದು: ಬೇಡಿದ್ದಾದರೆ ಕರ್ಣನು ಕವಚ ಂಡಲಗಳನ್ನು ಕೊಡಬಹುದೆಂದು ತರ್ಕಿಸಿ, ಬ್ರಹ್ಮಚಾರಿಯ ಪದಲ್ಲಿ ಬಂದು ಬೇಡುತಾನೆ. ಕರ್ಣ ಅವನೆಲ್ಲ ಕತ್ತರಿಸಿ ಡುತ್ತಾನೆ. ಇವೆಲ್ಲವು ಇಂದು ಅವಾಸ್ತವವೆನಿಸಿದರೂ ಆ ಂದರ್ಭದಲ್ಲಿ ಬಂದ ಕೆಲವಾತುಗಳು ತ್ಯಾಗಕ್ಕೆ ಉತ್ತಮ ಉದಾಹರಣೆಯಾಗಿವೆ.

---

೧ ವಿ.ವಿ. ೪–೨೯ ಪದ್ಯ ನೋಡಬಹುದು.

ಎಂದುಂ ಪೋಗೆಂದನೆ ಮಾ
ಱೆದನೆ ಪೆಱತೊಂದನೀವೆನೆಂದನೆ ನೊಂದಃ
ಎಂದನೆ ಸೆರಗಿಲ್ಲದೆ ಪಿಡಿ
ಯೆಂದನಿದೇಂ ಕಲಿಯೋ ಚಾಗಿಯೋ ರವಿತನಯಂ

ವಿ. ವಿ. ೧–೧೧೨

ಕರ್ಣನು ಬೇಡಿದವರಿಗೆ ಮುಂದೆ ಹೋಗೆಂದನೆ? ಸ್ವಲ್ಪ ತಡೆಯೆಂದು ಹೇಳಿದನೆ? ಬೇರೊಂದನ್ನು ಕೊಡುತ್ತೇನೆಂದನೆ? ಇವು ಯಾವ ಕಾಲಕ್ಕೂ ದಾನವಾಗಿಕೊಡುವವನಲ್ಲಿ ಇರಬೇಕಾದ ಗುಣಧರ್ಮ ಗಳಾಗಿವೆ. ಕರ್ಣಾವಸಾನದ ನಂತರ ಕವಿ ಕರ್ಣನ ಗುಣಗಳನ್ನು ಒಂದೊಂದಾಗಿ ಪಟ್ಟಿಮಾಡುತ್ತ 'ಕರ್ಣನಚಾಗ' ವನ್ನು ಹೇಳಿ ಕೊನೆಗೆ 'ಕರ್ಣರಸಾಯನಮಲ್ತೆ ಭಾರತಂ' ಎಂದು ಕರ್ಣನ ತ್ಯಾಗಗುಣವನ್ನು ಕಂಡು ತನ್ನ ಭಾರತವನ್ನು ಅವನಿಗೆ ಸಮರ್ಪಿ ಸಿದ್ದಾನೆ.

೬. ಶುಚಿಯಲ್ಲದವನ ಗಂಡುಂತೊಂಡುಂ

ಪಂಪ ಬಾಳಿಬದುಕಿದ್ದು ವೀರಯುಗದಲ್ಲಿ. ಹೀಗಾಗಿ ಕ್ಷಾತ್ರ ತೇಜಸ್ಸು ಅವನ ಕಾವ್ಯಗಳಲ್ಲಿ ಸಹಜವಾಗಿ ಮೂಡಿ ಬಂದಿದೆ. ಅಂದಿನ ಸಾಮಾಜಿಕ ಮೌಲ್ಯವೂ ಅದೇ ಆಗಿತ್ತು. 'ಈಯಲ್ ಜೀಯಲ್ ಶರಣ್ಬುಗೆ ಕಾಯಲ್'[1] ಎಂಬುದು ಆಗಿನ ವೀರ ದಮ ವಾಗಿತ್ತು. ರಣರಂಗದಲ್ಲಿ ಹೋರಾಡಿದ ಸಾಹಸ ಪರಾಕ್ರಮ ಗಳನ್ನು ಕುರಿತು ಅಂದಂದಿನ ರಾತ್ರಿಗಳಲ್ಲಿ 'ಬಂದಾ? ಬಲಂಗಳು

೧ ರನ್ನ ಕವಿ -ಗದಾಯುದ್ಧ ಸಂಗ್ರಹ. ತಿ. ನಂ. ಶ್ರೀ. ಪು. ೧-೫

ತವನ್ನು ಪರಮ ಭಾಗವತ' ಪುರಾಣಾದಿಕೊಂಡ ಪ್ರಸಂಗ
ಳು ವೀರಜೀವನದ ಆದರ್ಶವನ್ನು ಎತ್ತಿತೋರಿಸುತ್ತವೆ.
ಣರಂಗದಲ್ಲಿ ಶೌರ್ಯ ಸಾಹಸ ತೋರ್ಪಡಿಸಿದವನಿಗೆ ಸಾಮಾಜಿಕ
ಂಗದಲ್ಲಿ ವಿಶೇಷವಾದ ಗೌರವಾದರಗಳು ಸಲ್ಲುತ್ತಿದ್ದವು. ಆದರೆ
ದೇ ಸಂದರ್ಭದಲ್ಲಿ ಈ ವೀರಗುಣಕ್ಕೆ ತಕ್ಕಂತೆ ಶುಚಿತ್ವವೂ ಔಚಿತ್ಯವೂ
ವಶ್ಯವಾಗಿತ್ತೆಂಬುದು ಗಮನಿಸುವ ಸಂಗತಿಯಾಗಿದೆ. ಇದನ್ನು
ು ಭೀಷ್ಮರ ಪಾತ್ರದ ಮೂಲಕ ತೋರಿಸಿ ಕೊಟ್ಟಿದ್ದಾನೆ.
ೀಷ್ಮರು ಯೌವನದಲ್ಲಿ ಕಾಲಿರಿಸಿದಾಗ ಅವರ ತಂದೆಯಿಂದಾಗಿ
ಂದು ಪರೀಕ್ಷಾ ಪ್ರಸಂಗ ಬಂದೊದಗುತ್ತದೆ. ಮೃಗದ ಬೇಟೆಗೆಂದು
ೋದ ಶಂತನು ಮಹಾರಾಜನು ಸತ್ಯವತಿಯನ್ನು ಕಂಡು ಮನ
ೋತು ಅವಳನ್ನು ಮದುವೆಯಾಗಲು ಮನಸ್ಸು ಮಾಡುತ್ತಾನೆ.
ದರೆ ಅದು ಅವಳ ತಂದೆಯೊಡ್ಡಿದ ಶರತ್ತುಗಳಿಂದಾಗಿ ನುಂಗ
ಾರದ ತುತ್ತಾಗುತ್ತದೆ. ಕಾಮದಾಹದಲ್ಲಿ ದೇಹ ಕೃಶವಾಗು
ಡಗುತ್ತದೆ. ಇದನ್ನೆಲ್ಲ ತಿಳಿದುಕೊಂಡ ಗಾಂಗೇಯನು ತಂದೆಯ
ಸಂತೋಷಕ್ಕಾಗಿ 'ಎನ್ನದು ರಾಜ್ಯ ಲಕ್ಷ್ಮಿ ಪೋ ತನ್ನಯ
ದೆಯೆಂದುದನೆ ಕೊಟ್ಟು ವಿವಾಹ ಮನಿಂದೆ ಮಾಡುವೆಂ' ಎಂದು
ರ್ಧರಿಸಿ ಹಾಗೆ ನಡೆದುಕೊಳ್ಳುತ್ತಾನೆ. ಈ ಸಂದರ್ಭದಲ್ಲಿ
ೀಷ್ಮರ ವ್ಯಕ್ತಿತ್ವ ಒರೆಗಲ್ಲಿಗೆ ಹತ್ತುತ್ತಿದೆ. ತುಂಬು ಯೌವನದ
ೊಸ್ತಿಲಲ್ಲಿದ್ದ ಭೀಷ್ಮರು ತಂದೆಯ ಬಯಕೆ ಹೀನವೆಂದಾಗಲಿ,
ದಿಂದ ತನಗೆ ಬರಬೇಕಾದ ಪಟ್ಟ ಇನ್ನೊಬ್ಬರಿಗೆ ಹೋಯಿತಲ್ಲ
ಮತ್ಸರವನ್ನಾಗಲಿ ಹೊಂದಲಿಲ್ಲ.

ಮುಂದೆ ತಮ್ಮಂದಿರಿಗೆ, ಅನೇಕ ಅರಸು ಮಕ್ಕಳೊಡನೆ ಹೋರಾಡಿ–ಅಂಬೆ, ಅಂಬಿಕೆ, ಅಂಬಾಲಿಕೆಯರೆಂಬ ಕನ್ಯಾರತ್ನಗಳನ್ನು ಗೆದ್ದು ತಂದು ಅಂಬಿಕೆ–ಅಂಬಾಲಿಕೆಯರೊಂದಿಗೆ ವಿವಾಹ ನೆರವೇರಿಸಿದ. ಆದರೆ ಅಂಬೆ ಮಾತ್ರ 'ನಿನ್ನನಲ್ಲದೆ ಪೆಱರನೊಲ್ಲೆನೆಂದು' ಹಟಹಿಡಿದಾಗ, ಭೀಷ್ಮರು ತಮ್ಮ ಪ್ರತಿಜ್ಞೆಯನ್ನು ಹೇಳುತ್ತಾರೆ. 'ಈಗಳಬ್ಬೆಯೊಂದತ್ತಿಗೆಯೆಂಬ ಮಾತನೆನಗೇನೆನಲಕ್ಕುಮೊ ಪಂಕಜಾನನೆ' ಎಂದು ತಮ್ಮ ಮೊದಲಿನ ಪ್ರತಿಜ್ಞೆಯನ್ನು ಪುನರುಚ್ಚರಿಸುತ್ತಾರೆ. ಆಗ ಅಂಬೆ ಭೀಷ್ಮರ ಪರುಶುರಾಮರನ್ನು ಕರೆತರುತ್ತಾಳೆ. ಪರಶುರಾಮರು ಭೀಷ್ಮರಿಗೆ 'ಕೈಕೊಳ್ಳುದೀ ಕನ್ನೆಯಂ' ಎಂದು ಹೇಳಿದಾಗ ಭೀಷ್ಮರು 'ವೀರಶ್ರೀ ಕೀರ್ತಿಶ್ರೀ ಇವರನ್ನು ಬಿಟ್ಟು ಉಳಿದ ಹೆಣ್ಣುಗಳಿಗೆ ನನ್ನಲ್ಲಿ ಆಶ್ರಯವಿಲ್ಲ' ಎಂದು ಹೇಳುವರು. ಇದರಿಂದ ಭೀಷ್ಮರ ಪುರುಷವ್ರತದ ಬಿಗುವು ಚಾರಿತ್ರ್ಯದ ಗಟ್ಟಿತನ ಎಂತಹದು ಎಂಬುದು ಸ್ಪಷ್ಟವಾಗುತ್ತದೆ.

ಭೀಷ್ಮರ ಯೌವನದ ಕೊನೆಯ ಹಂತದಲ್ಲಿ ಇನ್ನೊಂದು ಸತ್ವಪರೀಕ್ಷೆ ಪ್ರಸಂಗ ಬರುತ್ತದೆ. ವಿಚಿತ್ರ ವೀರ್ಯ ಸಂತಾನವಿಲ್ಲದೆ ಗತಿಸಿ ಹೋದಮೇಲೆ ರಾಜ್ಯವು ರಾಜನಿಲ್ಲದೆ ಉಳಿದುದಕ್ಕಾಗಿ ಮರುಗಿದ ಸತ್ಯವತಿ ಭೀಷ್ಮರಿಗೆ 'ಮಗನೆ ಕೈಕೊಳ್ ಧರಾಭಾರಮಂ' ಎಂದು ಕೇಳಿಕೊಂಡಾಗ ಅವರು 'ಚಂದ್ರನು ತನ್ನ ಬೆಳದಿಂಗಳನ್ನು, ಸೂರ್ಯನು ತನ್ನ ಪ್ರಖರ ಪ್ರಕಾಶವನ್ನು ಸಮುದ್ರ ತನ್ನ ಆಳವನ್ನು, ಭೂಮಿ ತನ್ನ ಭಾರವನ್ನು. ಕುಲಶೈಲ ತನ್ನ ಉನ್ನತಿಕೆಯನ್ನು ಬಿಡುವುದಿದ್ದರೆ ಬಿಡಲಿ ನಾನು ಮಾತ್ರ ಪುರುಷವ್ರತವನ್ನು ಬಿಡಲಾರೆ' ಎಂದು ತಮ್ಮ ಅಚಲ ನಿರ್ಧಾರವನ್ನು ಹೇಳಿ, ತಮ್ಮ ಶೀಲ

ಚಾರಿತ್ರ್ಯ, ಶುಚಿತ್ವವನ್ನು ಪಾಲಿಸಿಕೊಂಡು ಬರುತ್ತಾರೆ. ಆದುದರಿಂದಲೆ ಕವಿ ತನ್ನ ಭಾರತ ಸಾಮ್ರಾಜ್ಯದ ಮುನ್ನ ಎಲ್ಲ ಪಾತ್ರಗಳ ಗುಣಾವಲೋಕನ ಮಾಡುತ್ತ, ಭೀಷ್ಮರನ್ನು ಕುರಿತು 'ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ' ಎಂದು ಅತ್ಯುನ್ನತಿಯ ಸ್ಥಾನ ಕೊಟ್ಟು ಗೌರವಿಸಿದ್ದಾನೆ.

ಇನ್ನು ಶೂರನಾಗಿದ್ದರೂ ಅಶುಚಿತ್ವ, ಅನೌಚಿತ್ಯ, ಲೋಕ ಅವನನ್ನು ಹೇಗೆ ಕಾಣುತ್ತದೆಂಬುದನ್ನು ಕೀಚಕನ ಪಾತ್ರದ ಮೂಲಕ ತೋರಿಸಿಕೊಟ್ಟಿದ್ದಾನೆ. ವಿಷಯಲೋಲುಪನಾದ ಕೀಚಕ ದ್ರೌಪದಿಯ ಮೇಲೆ ಮನಸ್ಸು ಮಾಡಿದಾಗ ಭೀಮನಿಂದ ಹತನಾದ. ಆಗ ಕವಿ ಪೌರುಷದೊಂದಿಗೆ ಶುಚಿತ್ವಕ್ಕಿರುವ ಬೆಲೆ ಎತ್ತಿತೋರಿಸಿದ್ದಾನೆ.

ರಾವಣನುಂಗಡ ಸೀತಾ
ದೇವಿಗೆ ಸೋಲ್ತುದಱಫಲಮನೆಯ್ದಿ ನಿವನಾ
ರಾವಣನಿಂ ಪಿರಿಯನೆಪೇ
ೞ್ವುದೊ ಶುಚಿಯುಳ್ಳದವನ ಗಂಡುಂ ತೊಂಡುಂ

ವಿ. ವಿ. ೮–೮೨

ಹಾದರದಲ್ಲಿ ಸತ್ತವರಿಗೆ ಅಳುವವರಾರಿದ್ದಾರೆ? ರಾವಣನು ಸೀತಾದೇವಿಯನ್ನು ಮೋಹಿಸಿ ಅದರ ಫಲವನ್ನು ಹೊಂದಿದ. ಇವನು ಆ ರಾವಣನಿಗಿಂತ ಹಿರಿಯನೆ? ಸ್ವಚ್ಛವಾದ ನಡತೆಯಿಲ್ಲದವನ ಪೌರುಷ ಪರಾಕ್ರಮಗಳಿಂದೇನು ಪ್ರಯೋಜನ? ಎಂದು ಕವಿ ಚಾರಿತ್ರ್ಯಕ್ಕಿರುವ ಮೌಲ್ಯವನ್ನು ಎತ್ತಿತೋರಿಸಿದ್ದಾನೆ.

೭. ಗರ್ವಮೆ ದೋಷಂ

ಪಂಪ ಬದುಕೆಂಬ ಸಮುದ್ರದಿಂದ ಮುಳುಗಿತಂದ ಹಲವು ಮುತ್ತುಗಳಲ್ಲಿ ಇದೂ ಒಂದು.ಮನುಷ್ಯಗರ್ವಿತನಾದರೆ ಅದು ಅವನ ಪ್ರಗತಿಗೆ ಮಾರಕವೆಂದು ತನ್ನ ಅನುಭವದಿಂದ ಕಂಡುಕೊಂಡಿದ್ದಾನೆ. ಅದನ್ನೇ ತನ್ನ ವಿಕ್ರಮಾರ್ಜುನ ವಿಜಯದ ಪೀಠಿಕಾ ಭಾಗದಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾನೆ. 'ಕವಿ ವ್ಯಾಸನೆಂಬಗರ್ವಮೆನಗಿಲ್ಲ ವೆಂಬಲ್ಲಿ ತನ್ನ ವಿನಯಭಾವ ತೋರ್ಪಡಿಸಿದ್ದಾನೆ. ಜ್ಞಾನದ ಅಪಾರತೆಯನ್ನು ಹೇಳುವಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತ ಪಡಿಸಿದ್ದಾನೆ.

ಆದಿಪುರಾಣದ ಭರತ ಬಾಹುಬಲಿಯರ ಪ್ರಸಂಗದಲ್ಲಿ ಗರ್ವದಿಂದ ಕೊಬ್ಬಿದವನ ಸ್ಥಿತಿ ಏನಾಗುತ್ತದೆಂಬುದನ್ನು ಬಹು ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಭರತ ತನ್ನ ಚಕ್ರರತ್ನವನ್ನು ಮುಂದಿಟ್ಟುಕೊಂಡು ದೇಶದೇಶಗಳ ಮೇಲೆ ದಾಳಿಮಾಡಿ ಎದುರಿಸಿ ದವರನ್ನು ಬಲತ್ಕಾರದಿಂದ ಮುರಿದೆರಗಿಸಿ ಕಪ್ಪತೆಗೆದುಕೊಂಡು ಷಟ್ಖಂಡಗಳನ್ನು ವಶಪಡಿಸಿಕೊಳ್ಳುತ್ತಾನೆ. ಈ ವಿಜಯದಿಂದ ಆತನ ಗರ್ವ ಮೇರೆ ಮೀರಿತು. ತನ್ನಂತಹ ಶೂರರು ಯಾರೂ ಇರಲಿಕ್ಕಿಲ್ಲ ವೆಂದು ಭ್ರಮಿಸಿ ವೃಷಭಾಚಲದಲ್ಲಿ ತನ್ನ ವಿಜಯದ ಪ್ರಶಸ್ತಿಯನ್ನು ಕೆತ್ತಿಸಬೇಕೆಂದು ಹೋಗುತ್ತಾನೆ. ಆದರೆ ಅಲ್ಲಿ ಇವನಿಗಿಂತ ಪೂರ್ವದ ಎಷ್ಟೋ ಚಕ್ರವರ್ತಿಗಳು ತಮ್ಮ ಪ್ರಶಸ್ತಿ ಗಳನ್ನು ಕೆತ್ತಿಸಿದ್ದರು. ಭರತನಿಗೆ ಪ್ರಶಸ್ತಿ ಕೆತ್ತಿಸಲು ಅಲ್ಲಿ ಸ್ಥಳಾವಕಾಶವೇ ಇರಲಿಲ್ಲ. ಆಗ ಭರತನಿಗೆ ಗರ್ವಭಂಗವಾಗಿ ''ಕೊಳಗೊಂಡಗರ್ವರಸ' ಸೋರಿ ಹೋಯಿತು.

ಇಷ್ಟಕ್ಕೆ ನಿಲ್ಲದೆ ಭರತ ಲೋಕವೆಲ್ಲಾ ತನಗೆರಗಿದರೂ ಬಾಹುಬಲಿ ಮೊದಲಾದ ತಮ್ಮಂದಿರು ತನ್ನನ್ನು ಅಧಿರಾಜನೆಂದು ಒಪ್ಪಿಕೊಳ್ಳದ್ದರಿಂದ ದಿಗ್ವಿಜಯ ಇನ್ನೂ ಮುಗಿದಂತಾಗಲಿಲ್ಲ. ಅವರು ಹಾಗೆ ಒಪ್ಪಿಕೊಳ್ಳದಿರಲು ಸಾಮ್ರಾಜ್ಯದಿಂದ ಫಲವೇನು? ಅವರನ್ನು ಎರಗಿಸಲೇಬೇಕೆಂದು ಹಟಹಿಡಿದು ಹೇಳಿಕಳಿಸಿದ. ಭರತನ ತಾಯಿ ಹೊಟ್ಟೆಯಲ್ಲಿ ಹುಟ್ಟಿದ ಎಲ್ಲ ತಮ್ಮಂದಿರೂ ಅಣ್ಣನೊಡನೆ ಹೋರಲೊಲ್ಲದೆ ರಾಜ್ಯವನ್ನು ತೊರೆದು ತಂದೆಯ ಬಳಿಗೆ ಹೋಗಿ ದೀಕ್ಷೆಗೊಂಡರು. ಭರತನಿಗೆ ಆಗಲೂ ಬುದ್ಧಿ ಬರಲಿಲ್ಲ. ಬಲತಾಯಿ ಮಗನಾದ ಯುವರಾಜ ಬಾಹುಬಲಿಯನ್ನು ಕೆಣಕಿದನು. ಅವನು ಭರತನ ಸಾಹಸಗಳನ್ನು ಕಡೆಗಣಿಸಿ ಹಾಸ್ಯ ಮಾಡಿ ನಕ್ಕು ಎದೆತು ನಿಂತನು. ಯುದ್ಧ ಅನಿವಾರ್ಯವಾಯಿತು. ಇಬ್ಬರೂ ಮಂತ್ರಿಗಳ ಸಲಹೆಗೆ ಒಪ್ಪಿ ದೃಷ್ಟಿಯುದ್ಧ, ಜಲಯುದ್ಧಗಳಲ್ಲಿ ಹೋರಾಡಿದರು. ಎಲ್ಲದರಲ್ಲೂ ಅಣ್ಣನಿಗೆ ಅಪಜಯವಾಯಿತು. ಆಮೇಲೆ ಮಲ್ಲ ಯುದ್ಧ ಕೈಕೊಂಡರು. ಅದರಲ್ಲಿ ಬಾಹುಬಲಿ ಭರತನನ್ನು ಹಿಡಿದೆತ್ತಿ ಹಿರಿಯಣ್ಣನೆಂಬ ಗೌರವದಿಂದ ನೆಲಕ್ಕೆ ಅಪ್ಪಳಿಸದೆ ಮೆಲ್ಲನೆ ಕೆಳಗಿಳಿಸಿದನು. ಇದು ಭರತನ ಗರ್ವಕೆಗೆ ಬಿದ್ದ ಮತ್ತೊಂದು ಪೆಟ್ಟು. ಇಲ್ಲಿ ಇವರ ಗರ್ವವನ್ನು ಕವಿ ಎತ್ತಿತೋರಿಸಿ ಅದು ಹೇಗೆ ಶಮನವಾಯಿತೆಂದು ಹೇಳುತ್ತಾನೆ. ಭರತ ಷಟ್ಖಂಡಗಳನ್ನು ಗೆದ್ದು ತಮ್ಮನನ್ನು ಗೆಲ್ಲಲಾಗದ ಶೂರತನಕ್ಕೆ ಹೇಸಿ ಗರ್ವಗಿರಿಯಿಂದ ಕೆಳಗಿಳಿದರೆ, ಬಾಹುಬಲಿ ಅಣ್ಣನಿಗೆ ಅವಿನಯ ತೋರಿಸಿದೆನಲ್ಲಾ ಎಂದು ಹೇಸಿ ತಪಸ್ಸಿಗೆ ಹೋದನು. ಈ ಸನ್ನಿವೇಶಗಳು ಗರ್ವದೋಷಕ್ಕೆ ಉತ್ತಮ ಉದಾಹರಣೆಯಾಗಿವೆ.

೮. ಮಾನಸನೆ ಮುರಾಂತಕಾ

ಮನುಷ್ಯನೆಂದರೆ ಯಾರು ? ಅವನಲ್ಲಿರಬೇಕಾದ ಗುಣಗಳಾವವು? ಎಂಬುದರ ಬಗ್ಗೆ ಕವಿಗಳು, ದಾರ್ಶನಿಕರು, ತತ್ವಜ್ಞಾನಿಗಳು, ಸಾಕಷ್ಟು ಅರ್ಥ ವಿವರಣೆ ನೀಡಿದ್ದಾರೆ. ನಿರ್ದಿಷ್ಟವಾಗಿ ಇಂಥವನೆ ಮನುಷ್ಯನು ಎಂದು ವ್ಯಾಖ್ಯೆಕೊಟ್ಟು ಹೇಳುವುದು ಕಷ್ಟದ ಕೆಲಸ. ಯಾಕೆಂದರೆ ಕಾಲ, ದೇಶ, ಅವಶ್ಯಕತೆಗನುಗುಣವಾಗಿ ಈ ವ್ಯಾಖ್ಯೆ ವಿಭಿನ್ನ ಅರ್ಥವ್ಯಾಪ್ತಿಹೊಂದಿದ್ದಾಗಿರುತ್ತದೆ. ಆದರೂ ಸಾರ್ವತ್ರಿಕವಾಗಿ ಎಲ್ಲರಿಗೂ ಒಪ್ಪಿತವಾಗುವ ಹಾಗೆ ಪಂಪಕವಿ ಮನುಷ್ಯನೆಂದರೆ ಯಾರು ಎಂಬುದನ್ನು ಹೇಳಲು ಪ್ರಯತ್ನಿಸಿದ್ದಾನೆ. ಆತ ಕೊಡುವ ಅರ್ಥವಿವರಣೆ ಆ ಯುಗದ ಅಗತ್ಯದ ಹಿನ್ನಲೆಯಲ್ಲಿ ಸೃಷ್ಟಿಗೊಂಡಿದ್ದರೂ, ಯಾವ ಯುಗಕ್ಕೂ ಅನ್ವಯಿಸುವ ಮೌಲ್ಯ ಅದರಲ್ಲಿದೆ. ಪಂಪನ ದೃಷ್ಟಿಯಲ್ಲಿ ಮನುಷ್ಯನೆಂದು ಕರೆಸಿಕೊಳ್ಳಲು ಅರ್ಹನಾಗಬೇಕಾದರೆ ಆತನಲ್ಲಿರಬೇಕಾದ ಗುಣಗಳನ್ನು ಈ ರೀತಿಯಾಗಿ ಪಟ್ಟಿ ಮಾಡುತ್ತಾನೆ.

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರ ಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಂ ಮೇನೊ ತೀರ್ದಪುದೆ ತೀರದೊಡಂ ಮಱಿ
ಮುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ
ದೇಶದೊಳ್

ವಿ. ವಿ. ೪–೨೯

ಗ ಭೋಗ ವಿದ್ಯೆ ಸಂಗೀತ ಗೋಷ್ಠಿಗಳಂತಹ ಗುಣಗಳಿಗಾಗರ ಾಗಿದ್ದವನೇ ಮನುಷ್ಯನು. ಇದು ಪಂಪ ಮನುಷ್ಯನೆಂದರೆ ಯಾರು ಎಂಬುದಕ್ಕೆ ಕೊಟ್ಟ ವ್ಯಾಖ್ಯೆ. (Definition) ವಿಲ್ಲದಿದ್ದರೆ ಆತ ಮನುಷ್ಯನೇ ಅಲ್ಲ. ಇವೆಲ್ಲ ಗುಣಗಳುಳ್ಳ ದೃಷ್ಟಶಾಲಿಗಳಾದ ಮನುಷ್ಯರು ಬನವಾಸಿಯ ಪ್ರದೇಶದಲ್ಲಿ ದ್ದಾರೆ. ಮನುಷ್ಯನಾಗಿ ಹುಟ್ಟುವ ಅದೃಷ್ಟ; ಹುಟ್ಟಿದರೂ ನವಾಸಿ ದೇಶದಲ್ಲಿಯೇ ಹುಟ್ಟುವ ಅದೃಷ್ಟ. ಇವೆರಡನ್ನೂ ದೆಯದ ನಿರ್ಭಾಗ್ಯರು ಕೊನೆಯ ಪಕ್ಷ ಆ ಬನವಾಸಿ ದೇಶದ ಂದನವನದಲ್ಲಿ ಮರಿದುಂಬಿಯಾಗಿ, ಕೋಗಿಲೆಯಾಗಿ ಹುಟ್ಟಿಯಾ ದರೂ ಭಾಗ್ಯಶಾಲಿಗಳಾಗಬೇಕೆಂಬುದು ಕವಿಯ ಉತ್ಕಟವಾದ ಕ್ಷೆ.

ಇದೇ ರೀತಿ ವಿಕ್ರಮಾರ್ಜುನ ವಿಜಯದಲ್ಲಿ ಇನ್ನೊಂದು ಂದರ್ಭ. ಅರ್ಜುನ ಅಗ್ನಿದೇವತೆಗೆ ಖಾಂಡವವನವನ್ನು ಊಟ ಮಾಡುವುದಕ್ಕಾಗಿ ಕೊಟ್ಟಿದ್ದಾನೆ. ಇದನ್ನು ತಿಳಿದ ಕೃಷ್ಣನು ರ್ಜುನನಿಗೆ–'ನೀನು ಏನು ಮಾಡಿದೆ? ಇನ್ನು ಮೇಲೆ ಕೊಡುವ ಮಾತನ್ನೇ ಆಡಬೇಡ. ಏಕೆಂದರೆ ಈತ ಕಪಟಿ, ಮೋಸಗಾರ'ನೆಂದಾಗ ರ್ಜುನ–'ಪ್ರೀತಿಯಿಂದ ಕೊಟ್ಟವನು ನಾನು, ಸಾಕ್ಷಿಯಾಗಿದ್ದವನು ನು ಮತ್ತು ಪಂಚಭೂತಗಳು. ಕೊಟ್ಟ ಸ್ಥಳವನ್ನು ಕೇಳು ದಾದರೆ ಪವಿತ್ರವಾದ ಯಮುನಾನದಿ ದಡಪ್ರದೇಶ. ಹೀಗಿರು ಗ ನಾನು ಮಾತು ಕೊಟ್ಟಿದ್ದನ್ನು ನಡೆಸುವುದು ನನ್ನ ಕ್ರಮ. ದಕ್ಕೆ ಎರಡು ಮಾತನಾಡಕೂಡದು. ಇಂತಹ ಸಂದರ್ಭಗಳು ದೃಷ್ಟದಿಂದಲ್ಲದೆ ಕೂಡಿ ಬರುತ್ತದೆಯೆ? ಎಂದು ಕೇಳುತ್ತ 'ಅದಕ್ಕೆ ರಡು ಮಾತನಾಡಕೂಡದು. ಒಂದು ವೇಳೆ ಇದಕ್ಕೆ ತಪ್ಪಿದರೆ

ಆತನು ಮನುಷ್ಯನೆ ಮುರಾಂತಕಾ?' ಎಂದು ಮನುಷ್ಯನ ಕರ್ತವ್ಯ ಕುರಿತು ಹೀಗೆ ಹೇಳುತ್ತಾನೆ.

ಒತ್ತಿತಱುಂಬಿನಿಂದ ರಿಪುಭೂಭುಜಸಮಾಜದ ದೇಗುಲಂ ನಿಭ
ಕೆತ್ತದೆ ಬಂದು ತನ್ನ ಮಱೆವೊಕ್ಕಡೆ ಕಾಯದೆ ಬಾಗದೊಳ್ಪಿನ
ಚ್ಚೊತ್ತದೆ ಪೂಣ್ದು ಬಾಳ್ದು ಪ್ರತಿಬಿಂಬಿಸಿ ನೆಂಬ
ಜಾಂಡಮೆಂಬುದೊಂ
ದತ್ತಿಯ ಪಣ್ಣೊಳಿರ್ದ ಪುಱುವಲ್ಲದೆ ಮಾನಸನೇ
ಮುರಾಂತಕಾ

ವಿ. ವಿ. ೫–೭೫

ಪೋಳಿಬಿದ್ದು ಅಡ್ಡಗಟ್ಟಿ ಬಂದ ವೈರಿಗಳೆಂಬ ಮರಗಳ ಬೇರು ಸಹಿತ ಕಿತ್ತಿ ಆಕಾಶದೆತ್ತರಕ್ಕೊಗೆಯಬೇಕು. ತನ್ನಲ್ಲಿ ಶರಣಾಗತಿಯಾಗಿ ಬಂದರೆ ರಕ್ಷಿಸಬೇಕು. ಹಾಗೆ ಮಾಡದಿದ್ದಲ್ಲಿ ಅವನು ಮನುಷ್ಯನೆನಿಸದೆ ಬ್ರಹ್ಮಾಂಡವೆಂಬೊಂದು ಅತ್ತಿಯ ಹಣ್ಣಿನೊಳಗಿನ ಹುಳುವಿನ ಸಮಾನನಾಗುತ್ತಾನೆ ಮುರಾಂತಕಾ ಎಂದು ಹೇಳುತ್ತಾನೆ. ಹತ್ತನೆಯ ಶತಮಾನವು ಶೌರ್ಯಸಾಹಸಗಳಿಗೆ ಹೆಸರಾದ ಕಾಲ. ಅಂದು ಯುದ್ಧಗಳಲ್ಲಿ ಸಾರ್ವಜನಿಕ ಸಾಹಸ ಕಾರ್ಯಗಳಲ್ಲಿ ಭಾಗವಹಿಸುವುದು ಒಂದು ಅದೃಷ್ಟವೆಂದು ಭಾವಿಸುತ್ತಿದ್ದರು. ಸತ್ತರೆ ವೀರ ಸ್ವರ್ಗ ಬದುಕಿದರೆ ರಾಜ್ಯಲಕ್ಷ್ಮಿ ಎಂಬುದು ಅಂದಿನ ವೀರರ ಧ್ಯೇಯವಾಕ್ಯವಾಗಿತ್ತು. ಹೀಗಾಗಿ ಕವಿ ತನ್ನ ಕಾವ್ಯದಲ್ಲಿ ಅಂದಿನ ಮನೋಧರ್ಮಕ್ಕೆ ತಕ್ಕಂತೆ ಮೌಲ್ಯಗಳನ್ನು ನಿರೂಪಿಸಬೇಕಾಗುತ್ತದೆ. ಆ ಮೌಲ್ಯ ಕೇವಲ ಒಂದು ಗುಂಪಿನ ಒಂದು ಕಾಲದ ಹಿತಸಾಧನೆಯದಾಗಿರದೆ ಅಥವಾ ಸಾರ್ವತ್ರಿಕ ಸಾರ್-

ಲಿಕವಾದ ವ್ಯಾಪಕ ಗುಣಪರಿವರ್ತನೆ ಎಂಬುದು ಸ್ಪಷ್ಟ ವಾಗುತ್ತದೆ. ಈ ಹಿನ್ನೆಲೆಯಲ್ಲಿ ಮೇಲಿನ ಪದ್ಯ ಗಮನಿಸಿದಾಗ; ಶೌರ್ಯ ಅಂದಿನ ಮೌಲ್ಯ ಹೌದು. ಆದರೆ ಪಂಪನು ಅದಕ್ಕೆ ಸಾರ್ವತ್ರಿಕ ದೀಕ್ಷೆಕೊಟ್ಟು ಸರ್ವಕಾಲಿಕ ಮೌಲ್ಯವಾಗಿ ಪರಿವರ್ತಿ ಸಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ.

ಪಂಪ ತನ್ನ ಭಾರತದಲ್ಲಿ ಚಿತ್ರಿಸಿದ ಪಾತ್ರಗಳಲ್ಲಿ ಮಾನವ ಮಾನವತ್ವ ಮಹಾಮಾನವತ್ವವನ್ನು ತೋರುವ ಗುಣಗಳುಳ್ಳ ಪಾತ್ರಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದಾನೆ. ಮುಕ್ತಾಯದಲ್ಲಿ ತನ್ನ ಭಾರತ ಯಾವ್ಯಾರಿಂದ ಲೋಕಪೂಜ್ಯವಾಯಿತೆಂದು ಹೇಳು ವಲ್ಲಿ ಕೆಲ ಗುಣವಿಶೇಷಗಳುಳ್ಳ ವ್ಯಕ್ತಿಗಳ ಚಿತ್ರಣ ಕೊಡುತ್ತಾನೆ. ಆ ಪದ್ಯ ಹೀಗೆ ಬರುತ್ತದೆ:

ಬಲದೊಳ್ ದುರ್ಯೋಧನಂ ಸತ್ವದೊಳಿನತನಯಂ
ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ
ಚಾಪ ವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್
ಫಲ್ಗುಣಂ ಧರ್ಮದೊಳ್ನಿ
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲವರ್ಗಳಿನೀ ಭಾರತಂ
ಲೋಕಪೂಜ್ಯಂ
ವಿ. ವಿ. ೧೪–೬೪

ಬಲದಲ್ಲಿ ದುರ್ಯೋಧನ, ಸತ್ವದಲ್ಲಿ ಕರ್ಣ, ಶೌರ್ಯದಲ್ಲಿ ಭೀಮಸೇನ, ಬಲದಲ್ಲಿ ಶಲ್ಯ, ಅತ್ಯುನ್ನತಿಯಲ್ಲಿ ಭೀಷ್ಮ, ಚಾಪವಿದ್ಯೆ

ಯಲ್ಲಿ ದ್ರೋಣ, ಸಾಹಸದಲ್ಲಿ ಅರ್ಜುನ, ಧರ್ಮದಲ್ಲಿ ನಿರ್ಮಲ ಚಿತ್ತನಾದ ಧರ್ಮಪುತ್ರ, ಇಲ್ಲಿ ಛಲ, ಗಂಡು, ಬಲ , ಸಾಹಸ, ಲೌಕಿಕ ಜೀವನಕ್ಕೆ ಇರಬೇಕಾದ ಮಾನವ ಸಹಜ ಗುಣಗಳು ಸತ್ಯ ಅತ್ಯುನ್ನತಿ. ಧರ್ಮದಲ್ಲಿ ನಿರ್ಮಲಚಿತ್ತ, ಇವು ಮಹಾಮಾನವ ನಲ್ಲಿಯು ಬೇಕಾದ ಗುಣಗಳು. ಇವೆಲ್ಲ ಗುಣಗಳು ಲೌಕಿಕ ಗುಣ ಗಳಾಗಿರುವದರಿಂದ ಭಾರತ ಲೋಕ ಪೂಜ್ಯವೂ ಆಗಿದೆ.

೯. ಜೋಳದಪಾಳಿಯಂ ನೆರಪಿದಂಗಂಡಂ

ಮನುಷ್ಯನಾದವನು ಹುಟ್ಟಿಬಂದ ಬಳಿಕ ಹಲವು ಋಣಗಳಿಗೆ ಬದ್ಧನಾಗಿರುತ್ತಾನೆ. ತಂದೆತಾಯಿಗಳ ಋಣ, ಗುರುವಿನ ಋಣ, ಧರ್ಮದ ಋಣ, ಮತ್ತು ಅನ್ನದ ಋಣ. ಇವುಗಳನ್ನು ಅತ ತೀರಿಸಲೇಬೇಕು. ನಮ್ಮ ಪ್ರಾಚೀನ ಕನ್ನಡ ಕವಿಗಳಾದ ಪಂಪಾದಿ ಗಳು ಧರ್ಮದ ಋಣಕ್ಕಾಗಿ ಪುರಾಣಗಳನ್ನು ಉಪ್ಪಿನ ಋಣಕ್ಕಾಗಿ ಆಳರಸರನ್ನು ಲೌಕಿಕ ಕಾವ್ಯಗಳಲ್ಲಿ ತಗುಳ್ಚಿ ಹೇಳುವ ಪದ್ಧತಿಯನ್ನು ರೂಢಿಯಲ್ಲಿ ತಂದವರು ಎಂಬುದು ಗಮನಿಸಬೇಕಾದ ಸಂಗತಿ. ಅವರವರ ಯೋಗ್ಯತಾನುಸಾರ ಈ ಋಣ ಮುಕ್ತಿಯ ಕಾರ್ಯ ನಡೆಯಲೇ ಬೇಕು. ಇಲ್ಲವಾದರೆ ಆತ ಋಣ ಬಾಹಿರನಾಗುತ್ತಾನೆ. ಇಂಥ ವ್ಯಕ್ತಿ ಸಮಾಜದಿಂದ ಬಂಧು ಬಾಂಧವರಿಂದ ತಿರಸ್ಕರಿಸಲ್ಪ-ಡುತ್ತಾನೆ. ಅವನಿಗೆ ಯಾವ ಗೌರವಾದರಗಳು ದೊರೆಯುವದಿಲ್ಲ. ಹೀಗಾಗಿ ಇದು ಆದಿನ ಕಾಲದ ಪ್ರಮುಖ ಮೌಲ್ಯಗಳಲ್ಲೊಂದಾ ಗಿತ್ತು. ಈ ಕಾರಣದಿಂದ ನಮ್ಮ ಪ್ರಾಚೀನ ಕಾವ್ಯಗಳು, ಶಿಲಾ ಶಾಸನಗಳು ಅನ್ನದ ಋಣಕ್ಕಾಗಿ ಜೀವದ ಹಂಗುದೊರೆದು ಹೋರಾಡಿದವರ ಚಿತ್ರಣ ಹೃದಯಂಗಮವಾಗಿ ಬಿಂಬಿಸಲ್ಪಟ್ಟಿವೆ.

ವುಗಳನ್ನು 'ಜೋಳವಾಳಿ' 'ಲೆಂಕವಾಳಿ'ಗಳೆಂಬ ವಿಶಿಷ್ಟ ಸರುಗಳಿಂದ ಕರೆಯುತ್ತಿದ್ದರು. ಅವರು ಸಾಕಿದ ಒಡೆಯನಲ್ಲಿ ಚಲವಾದ ಶ್ರದ್ಧೆ, ಸ್ವಾಮಿನಿಷ್ಠತೆ ತೋರಿಸುತ್ತಿದ್ದರು. ಅವನಿ ಾಗಿ ಪ್ರಾಣತ್ಯಾಗ ಮಾಡಲೂ ಸಿದ್ಧರಿದ್ದರು. ಜೋಳವಾಳಿ ಾಗಿ ಹೋರಾಡಲು ಅಣಿಯಾದ ವೀರಭಟರ ಮಾತುಗಳನ್ನು ಂಪಭಾರತದಿಂದ ಉದಾಹರಿಸಬಹುದು. 'ವೀರ ಪುರುಷನಾಜಿ ಯೊಳೆನ್ನರಸಂಗೆ ತೋರ್ಪುವೆಂ'[೧] 'ಪೂಣ್ದಂತ ಬಲಂ ಕಟ್ಟುತ್ತಿ ಂದು ತನ್ನಾಳ್ದಂ ಕರಂಮೆಚ್ಚೆಗೆಲ್ವವನಾಂ ಶ್ರೀ ವಧು ಪತ್ತುಗುಂ'[೨] ಲ್ತಿಱಿಯದಿದ್ದೊಡೆ ಜೋಳವನೆಂತು ನೀಗುವಂ[೩]' 'ಆಜಿಯುಂ ತ್ತು ಸಂಗರದೊಳ್ ಜೋಳದಪಾಳಿಯುಂ ನೆರಪಿದಂಗಂಡಂ ಱಂ ಗಂಡನೇ[೪]' ಎಂದಿನ ವೀರರಿಂದ ಬಂದ ಇವೆಲ್ಲ ಮಾತುಗಳು ್ವಾಮಿನಿಷ್ಠೆಯನ್ನು ಜೋಳದ ಪಾಟಿಗಾಗಿ ಹೋರಾಡುವದನ್ನು ೋರಿಸಿ ಕೊಡುತ್ತವೆ.

ಕುರು ಪಾಂಡವರಲ್ಲಿ ಸಂಧಾನದ ಮಾತುಕತೆಗಳು ವಿಫಲ ಾಂದು ಯುದ್ಧ ಅನಿವಾರ್ಯವಾದಾಗ, ದ್ರೋಣರ ಸಲಹೆಯ ಕಾರ ದುರ್ಯೋಧನ ಭೀಷ್ಮರಿದ್ದೆಡೆಗೆ ಬರುತ್ತಾನೆ. ಆಗ ೀಷ್ಮರು ದುರ್ಯೋಧನನನ್ನು ಕುರಿತು ಹೀಗೆ ನುಡಿಯುತ್ತಾರೆ:– ಟ್ಟಂ ಪುಟ್ಟಿದೊಡೆ ಎಮಗೆ ಬೞಿಯನುಟ್ಟಿದಿ ಪ್ರೆಮಿತ್ತಿದಾವುದು ನೆವಾಳ್ತಿಗೆ ಟ್ಟಿಂದೆ' ರಣೋದ್ಧತನಾಗೆಂಬುದನೆಮ್ಮನಸ್ಯರ ೇಳೆಂನಿಂ ಪ್ರಾರ್ಥಿಸಲ್ವೇಟ್ಟುದೇ' ಎಂದು ತಮ್ಮ ಜೋಳದ

---

೧ ಪಿ.ಪಿ. ೧೦–೪೦ ೨ ಪಿ.ಪಿ. ೧೦–೪೪

೩ ಪಿ.ಪಿ. ೧೦–೪೩ ೪ ಪಿ.ಪಿ. ೧೦–೪೩

ಪಾಟೀಯನ್ನು ನೆನೆದು ನಿರ್ವಹಿಸ ಬೇಕಾದ ಕರ್ತವ್ಯದತ್ತ ಕಾರ್ಯೋನ್ಮುಖರಾಗುತ್ತಾರೆ. ಭೀಷ್ಮರು ದುರ್ಯೋಧನನ ಬಂಧಿತರಾದರೂ ಶರೀರ ವೃಥಾ ಸವೆಯಬಾರದೆಂಬುದು ಅವರ ಅಭಿಪ್ರಾಯ.

ಈ ಜೋಳದಪಾಟೀಯ ಮಹತ್ವವನ್ನು ಮನಗಾಣ ಬೇಕಾದರೆ ಕರ್ಣನ ಪಾತ್ರವನ್ನು ಅವಲೋಕಿಸುವುದು ಹೆಚ್ಚು ಸಮಂಜಸ. ಕೃಷ್ಣ ಕರ್ಣನನ್ನು ಪಾಂಡವರೊಡಗೂಡಲು ಪರಿ-ಪರಿಯಾಗಿ ಕೇಳಿಕೊಳ್ಳುತ್ತಾನೆ. ಅದಕ್ಕೆ ಕರ್ಣ—'ಆತ್ಮವಿಶ್ವಾಸದಿಂದ ದುರ್ಯೋಧನನು ನನಗೆ ಮಾಡಿದ ಒಳ್ಳೆಯ ಕಾರ್ಯಗಳನ್ನು ಮರೆತು, ನನ್ನ ಕೀರ್ತಿ ಮಾಸಿಹೋಗುವಹಾಗೆ ನಂಟರ ನೆಪದಲ್ಲಿ ಪಾಂಡವರೊಡನೆ ಸೇರಿಕೊಂಡರೆ ನೀವೂ ಹೇಸುವುದಿಲ್ಲವೆ? ನಂಬಿದ ರಾಜನಿಗೆ ಹೇಗೆ ಯುದ್ಧದಲ್ಲಿ ತಪ್ಪಿನಡೆಯಲಿ' ಎಂದು ತನ್ನ ಸ್ವಾಮಿನಿಷ್ಠೆಯನ್ನು ತೋರಿಸುತ್ತಾನೆ. ತಾಯಿಯಾದ ಕುಂತೀದೇವಿಯೂ ಕೃಷ್ಣನ ಸೂಚನೆಯ ಪ್ರಕಾರ ತನ್ನ ಮಕ್ಕಳ ರಕ್ಷಣೆಯ ಕಾರ್ಯಕ್ಕಾಗಿ ಗಂಗಾತಡಿಯಲ್ಲಿದ್ದ ಕರ್ಣನೆಡೆಗೆ ಬರುತ್ತಾಳೆ. ಕರ್ಣ ಸೂರ್ಯಮಂತ್ರವನ್ನು ಜಪಿಸಿ ಅರ್ಘ್ಯಪ್ರದಾನಮಾಡಿ ಪ್ರದಕ್ಷಣೆ ಹಾಕುವಾಗ ಎದುರಿನಲ್ಲಿ ಕುಂತೀದೇವಿಯನ್ನು ಕಂಡು ಪ್ರೀತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡುವನು. ಕುಂತಿ ಅವನನ್ನು ಪ್ರೀತಿಯಿಂದ ಆಲಿಂಗಿಸಿ ಹರಸುವಳು. ಆಗ ಕರ್ಣ 'ನೀವು ಬಂದ ಕಾರ್ಯವಾವುದು!' ಎಂದು ಕೇಳುವನು. ಕುಂತಿ 'ಕಂದಾ ನಿನ್ನನ್ನೇ ನಂಬಿರುವ ನಿನ್ನ ತಮ್ಮಂದಿರು ನಿನಗೆ ಸೇವೆ ಮಾಡುವ ಹಾಗೆ ನೀನೆ ರಾಜ್ಯವನ್ನು ಆಳು. ನಿನಗೆ ಪ್ರಾಪ್ತವಾದ ರಾಜ್ಯವನ್ನು ನಿನ್ನ ತಮ್ಮಂದಿರು ದುರ್ಯೋಧನನನ್ನು ಮುಂದು ಮಾಡಿಕೊಂಡು ಸೆಣಸಾಡುವರು. ಇದರಿಂದ [illegible]

ಪಕ್ಷಕ್ಕೂ ಸ್ವಲ್ಪವೂ ದೋಷ ಉಂಟಾಗುವುದಿಲ್ಲ. ಹಾಗೆ ನೀನು ಸ್ವ ಬೇಕೆಂದು ಕೇಳಿಕೊಂಡಾಗ, ಕೀರ್ತಿ–ಜೋಳಕ್ಕೆ ತಪ್ಪಿ ಬಾಳು ವುದೆ? ಅನ್ನದ ಋಣಕ್ಕೆ ಎರವಿ ಬಾಳುವುದೆ? ಎಂದು ನಾರು ಪ್ರಶ್ನೆ ಹಾಕುತ್ತಾನೆ.

ಧರೆಯುಮಂ ಲೋಭ ಸಂಬಂಧವಿಲ್ಲದಮಂತ್ರಿತರಿಂ
ಪಾಪಕ್ಕೆ ಪಕ್ಕಾಗೆ ಪಾ
ಟೀರಮನೊಕ್ಕಾಳ್ದು ನಾಡನ್ನು ನಿಕ್ಕುಮನು
ಪಿಂತಿಕ್ಕಿ ಜೋಳಕ್ಕೆ ತ
ಪ್ಪಿ ದಾಸಿಮಂ ಬಾಳ್ವುದೆ ಪ್ರಾಣ್ಮ ನಿಲ್ಲದೆಯಿಂ
ಬಾಳ್ವಂತು ವಿಖ್ಯಾತ ಕೀ
ರ್ತಿಯನೋರಂತೆಯೂ ಪಡೆದೆಂ ಸಂಮನಗೇ
ಕಲ್ಪಾಂತರಸ್ಥಾಯಿಯಂ.
ವಿ. ಪು. ೯–೮೪

ಧರೆಯನ್ನೂ ಲೋಭವನ್ನೂ ಇವೆರಡು ಪಾಪಕ್ಕೆ ಭಾಗಿಯಾಗಿರಲು ಹಿಂದಿನ ಸಂಪ್ರದಾಯವನ್ನು ಬಿಟ್ಟು, ಸ್ವಾಮಿಯಿಂದ ಬಂದಿರುವ ನ್ಯಾಯಗಳೆಲ್ಲ ಹಿಂದಕ್ಕೆ ಹಾಕಿ. ಅನ್ನದ ಋಣಕ್ಕೆ ಎರವಿ ಬಾಳುವುದೆ? ಜಗತ್ತಿಗೆ ಪ್ರಸಿದ್ಧವಾದ ಈ ಬಿರುದು. ಪ್ರಖ್ಯಾತ ಕೀರ್ತಿಯನ್ನು ಬಾಳಿಸ ಹಾಗೆ ಯುಗಗಳಲ್ಲಿಯೂ ನಿಲ್ಲುವಂತಹುದೆ ಹೇಳಿ ತಾಯಿ' ಎಂದು ಸ್ವಾಮಿನಿಷ್ಠೆಯನ್ನು ಜೋಳದಪಾಟಿಯು ಮಹತ್ವವನ್ನು ಎತ್ತಿತೋರಿಸಿದ್ದಾನೆ.

ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಪಂಪ ಇಲ್ಲಿ ಹೇಳಿದ ಸ್ವಾಮಿನಿಷ್ಠೆಯ ತತ್ವವನ್ನು ಪ್ರತಿಯೊಬ್ಬರು ತಮ್ಮ ಜೀವನ

ದಲ್ಲಿ ಅಳವಡಿಸಿಕೊಂಡು ನಡೆದರೆ ನಮ್ಮ ರಾಷ್ಟ್ರವ್ಯಾಪಿ ಎಷ್ಟೋ ಸಮಸ್ಯೆಗಳಿಗೆ ಸುಲಭದಲ್ಲಿ ಪರಿಹಾರ ದೊರೆಯಬಹುದು.

೪. ಇತರ ಮೌಲ್ಯಗಳು

ಇಲ್ಲಿಯವರೆಗೆ ಪಂಪ ಪ್ರತಿಪಾದಿಸಿದ ಬದುಕಿನ ಅಖಂಡ ಮೌಲ್ಯಗಳನ್ನು ನೋಡಿದೆವು. ಪಂಪನು ಯಾವುದು ಮೌಲ್ಯವೆಂದು ಪರಿಗಣಿಸಿದ್ದನೋ ಅವುಗಳಿಗೆ ಹೆಚ್ಚಿನ ಒತ್ತು ಕೊಟ್ಟು ತನ್ನೆರಡು ಕಾವ್ಯಗಳಲ್ಲಿ ಸುದೀರ್ಘವಾಗಿ ವಿವರಿಸಿದ್ದಾನೆ. ಇನ್ನು ಕೆಲವೆಡೆ ಸಂದರ್ಭಕ್ಕನುಗುಣವಾಗಿ ಬಿಡಿ ಬಿಡಿಯಾಗಿ ಗಾದೆಮಾತುಗಳ ರೀತಿಯಲ್ಲಿ ಹಲವು ಮೌಲ್ಯಗಳನ್ನು ಪ್ರತಿಪಾದಿಸಿದ್ದಾನೆ. ಅವುಗಳನ್ನು ಇತರ ಮೌಲ್ಯಗಳ ಗುಂಪಿನಲ್ಲಿ ಸೇರಿಸಿ ವಿವರಿಸಲಾಗಿದೆ.

ಸ್ವಾಭಿಮಾನ :

ಮನುಷ್ಯನಿಗೆ ಹಿತಮಿತವಾದ ಸ್ವಾಭಿಮಾನಬೇಕೆಂದು ಪಂಪನ ಹಿತನುಡಿಯಾಗಿದೆ. ಅತಿಯಾದ ಸ್ವಾಭಿಮಾನ ಅಹಂಕಾರಕ್ಕೆಡೆಮಾಡಿ ಕೊಡುವುದರಿಂದ ಸೌಜನ್ಯಪೂರ್ಣ ಸ್ವಾಭಿಮಾನ ವ್ಯಕ್ತಿಯು ವ್ಯಕ್ತಿತ್ವರೂಪಗೊಳ್ಳಲು ಅವಶ್ಯವೆಂದು ಕವಿಯು ಅಭಿಪ್ರಾಯ. ಪಂಪ ಅರಿಕೇಸರಿಯ ಆಸ್ಥಾನದ ಕವಿಯಾಗಿ ಗೌರವಿಸಲ್ಪಟ್ಟರೂ ಒಳಗೊಳಗೇ ಅವನ ಸ್ವಾಭಿಮಾನದ ಚಿತೆ ಭುಸುಗುಡುತ್ತಿತ್ತು. ಪಂಪ ಅರಿಕೇಸರಿಯ ಆಸ್ಥಾನದ ಕವಿಯಾಗಿದ್ದರೂ, ತನಗೆ ಗೌರವಾದರಗಳು ಸಲ್ಲುತ್ತಿದ್ದರೂ, ಅರಸನೊಂದಿಗೆ ಆತ್ಮೀಯ ಸ್ನೇಹ ಹೊಂದಿದ್ದರೂ, ಒಳಗೊಳಗೆ ಒಂದು ತೆರನಾದ

ತಳಮಳವಿತ್ತು. ಅದನ್ನು ಆದಿಪುರಾಣದಲ್ಲಿ ಹೇಳಿಯೇ ಬಿಟ್ಟಿದ್ದಾನೆ. 'ಪೆಱರ್ಗೆಱವುದೇಂ ಪೆಱಱ ನಾಡುವುದೇಂ ಪೆಱರ್ಗಿಂದ ದುಪ್ಪುದೇಂ' ಎಂದು ನಿಷ್ಠುರವಾಗಿ ನುಡಿದಿದ್ದಾನೆ. ಈ ಹಂಗಿನ ಮಾತು ಅವನ ಸ್ವಾಭಿಮಾನವನ್ನು ಬಡಿದೆಬ್ಬಿಸಿದೆ. ಜನಪದ ಜೀವನದಲ್ಲಿ ಇದೇ ಅಭಿಪ್ರಾಯ ಹೊಂದಿದ ಒಂದು ತ್ರಿಪದಿ ಹೀಗೆ ಬರುತ್ತದೆ. 'ಮುಂದೇನು ಕೊಟ್ಟೀತು ಮನ್ನವೇನು ದಣಿದೀತು ಬಂಜಾನದಾನಗಿರಿವಲ್ಲಿಕೊಟ್ಟರ ! ಮನೆತುಂಬ ನಮ್ಮ ಮನೆ ತುಂಬ'. ಪಂಪ ಹೇಳುವ ಮಾತಿಗೂ ಜಾನಪದ ತ್ರಿಪದಿ ಹೇಳುವ ಮಾತಿಗೂ ಎಷ್ಟು ಸಾಮ್ಯವಿದೆ. ಕನ್ನಡಿಗರ ಸ್ವಾಭಿಮಾನಕ್ಕೂ ತನ್ನದೇ ಆದ ಒಂದು ಉಜ್ವಲ ಪರಂಪರೆಯಿದೆ ಎಂಬುದು ಈ ಮಾತಿನಿಂದ ತಿಳಿದುಬರುತ್ತಿದೆ.

ಇನ್ನು ಪಂಪ ಕವಿ ಬೇರೆ ಬೇರೆ ಸಂದರ್ಭಗಳಲ್ಲಿ ಆಯಾ ಪಾತ್ರಗಳ ಮೂಲಕ. ಆಯಾ ಸಂದರ್ಭಕ್ಕನುಗುಣವಾಗಿ ಹೇಳಿರುವ ಮಾತುಗಳಿಂದ ಅಳರಸರ ಬಗ್ಗೆ ಯಾವ ಅಭಿಪ್ರಾಯ ಹೊಂದಿದವನಾಗಿದ್ದನೆಂಬುದು ತಿಳಿದು ಬರುತ್ತದೆ. 'ಇರುದೊತ್ತೇಗಿಯುಂ ಭೂಪನೆಂಬರ್'[೧] 'ಸಜದೊಳ್ ಭೂಪರೆಂಬ ರವಿನೇಕಳಪ್ಪರ್'[೨] ...ಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ'[೩] ಹೀಗೆ ಆಶ್ರಿತ ಕವಿಯಾಗಿದ್ದರೂ ಅಧಿಕಾರದರ್ಪಕ್ಕೆ ಮಣಿಯದೆ ತನ್ನ ಸ್ವಾಭಿಮಾನವನ್ನು ...ಯ್ದುಕೊಂಡು ಅಭಿಮಾನಧನನಾಗಿ ಬಾಳಿದವನಾಗಿದ್ದ ಪಂಪ.

---

೧ ವಿ.ವಿ. ೪–೧೧   ೨ ವಿ.ವಿ. ೧೨–೪೦
೩ ವಿ.ವಿ. ೧೨–೯೨

ಕಷ್ಟದಿಂದ ಸಂಪಾದಿಸಿದ್ದು ಹೃದ್ಯವಾಗುತ್ತದೆ:

ಮನುಷ್ಯನು ಪರಿಶ್ರಮ ಜೀವಿಯಾಗಬೇಕು. ತಾನು ಕೈಕೊಂಡ ಕಾರ್ಯ ಎಷ್ಟೇ ಕಷ್ಟನಷ್ಟಗಳಿಂದ ಕೂಡಿದ್ದಾದರೂ ಅವಿರತ ಪರಿಶ್ರಮದಿಂದ ಸಾಧನೆ ಮಾಡುವ ಪ್ರವೃತ್ತಿ ಬೆಳಸಿಕೊಳ್ಳಬೇಕು ಎಂಬುದು ಕವಿಯ ಹಿತನುಡಿ. ಆದರೆ ಅದು ನ್ಯಾಯ ಸಮ್ಮತವಾಗಿರಬೇಕು. ಇತರರ ಹಿತಾಸಕ್ತಿಗಳಿಗೆ ಬಾಧೆಯನ್ನುಂಟು ಮಾಡಬಾರದು. ಅಂದಾಗ ಆ ಸಂಪಾದನೆ ಹೃದ್ಯವಾಗುತ್ತದೆ. ಇದನ್ನು ಕವಿ ವಿಕ್ರಮಾರ್ಜುನ ವಿಜಯದಲ್ಲಿ ಅರ್ಜುನ ಶಿವನಿಂದ ಪಾಶುಪತಾಸ್ತ್ರ ಪಡೆಯುವ ಸಂದರ್ಭದಿಂದ ಸ್ಪಷ್ಟಪಡಿಸಿದ್ದಾನೆ. ಕೌರವರನ್ನು ಗೆಲ್ಲುವುದು ದಿವ್ಯಾಸ್ತ್ರವಿಲ್ಲದೆ ಸಾಧ್ಯವಾಗಲಾರದೆಂದು ವ್ಯಾಸಮಹರ್ಷಿಗಳಿಂದ ತಿಳಿದುಕೊಂಡಮೇಲೆ ಅರ್ಜುನ ಶಿವನಿಂದ ಪಾಶುಪತಾಸ್ತ್ರ ಪಡೆಯುವದಕ್ಕಾಗಿ ಇಂದ್ರಕೀಲ ಪರ್ವತಕ್ಕೆ ಬರುತ್ತಾನೆ. ಅಲ್ಲಿ ಉಗ್ರವಾದ ತಪಸ್ಸನ್ನು ಕೈಕೊಳ್ಳುತ್ತಾನೆ. ಎಷ್ಟೇ ಎಡರು ತೊಡರು ಬಂದರೂ ಹಿಂಜರಿಯದೆ ಛಲದಂಕಮಲ್ಲನಾಗಿ ತನ್ನ ತಪಸ್ಸು ಮುಂದುವರಿಸುತ್ತಾನೆ. ಅವನ ಈ ಪರಿಯ ಪರಿಶ್ರಮಕ್ಕೆ ಶಿವನು ಮೆಚ್ಚಿ ಪ್ರತ್ಯಕ್ಷನಾಗಿ ತನ್ನ ದಿವ್ಯಾಸ್ತ್ರವಾದ ಪಾಶುಪತಾಸ್ತ್ರವನ್ನು ಅರ್ಜುನನಿಗೆ ಕೊಡುತ್ತಾನೆ. ಆಗ ಕವಿ ಕ್ಲೇಶದ ಫಲಮದೇನಾಗೊಳ್ಳದೆ[1] ಎಂದರೆ 'ಕಷ್ಟದ ಸಂಪಾದನೆ ಹೃದ್ಯವಾಗದೆ ಇರುವುದೆ? ಕಾರ್ಯಕ್ಕೆ ತಕ್ಕ ಪ್ರತಿಫಲ ಬರದೆ ಇರುವುದೆ?' ಎಂದಿದ್ದಾನೆ. ಈ ಮಾತು ಇಂದಿನ ಬದುಕಿಗೂ ಅನ್ವಯವಾಗುತ್ತದೆ. ನಾಣ್ಣುಡಿ ರೂಪದ ಈ ಹಿತೋಕ್ತಿ ಬದುಕಿಗೊಂದು ಮಾರ್ಗ ಸೂಚಿಯಾಗಿದೆ.

---

೧ ವಿ.ವಿ. ೮-೨೬

ಅದೇ ರೀತಿ ಶೌರ್ಯಶೀಲನಾದವನಿಗೆ ಶತ್ರುಭಯವೂ ಇರುವದಿಲ್ಲವೆಂಬ ಸಿದ್ಧಾಂತವನ್ನು ಇನ್ನೊಂದೆಡೆ ಹೇಳುತ್ತಾನೆ. ವಿಕ್ರಮಾರ್ಜುನ ವಿಜಯದ ಒಂಬತ್ತನೆಯ ಆಶ್ವಾಸದಲ್ಲಿ ಅರ್ಜುನನ ಶೌರ್ಯಸಾಹಸ ಕುರಿತು ಹೇಳುವಾಗ ಈ ಮಾತು ಬರುತ್ತದೆ.

ಶ್ರೀ ನೆಗೞ್ತೆಗೆ ವೀರ
ಶ್ರೀಗಾಗರಮಪ್ಪನೆಂಬ ಕಳಕಳ ವಿಜಯೋ
ದ್ಯೋಗದೊಳ್ ನೆಗೞ್ದನೆಂಬು
ದ್ಯೋಗಿಗೆ ಮಲೆವನ್ನೃಪತಿ ಮಂಡಳಿಕರೊಳರೇ

ವಿ. ವಿ. ೯–೧

ಉದ್ಯೋಗಶೀಲನಾದವನಿಗೆ ಸಂಪತ್ತು, ಕೀರ್ತಿ, ಜಯಲಕ್ಷ್ಮಿ ಇವು ತನ್ನಿಂದ ತಾನೆ ಬರುತ್ತವೆಂಬುದು ಇದರರ್ಥ. ಇಂತಹ ಉದ್ಯೋಗಶೀಲನಿಗೆ ಶತ್ರುವೂ ಅಂಜಿ ಹಿಂಜರಿಯುತ್ತಾನೆ. ಪಂಪ ಹೇಳುವ ಈ ಉದ್ಯೋಗ ಶೀಲತೆ ವಚನಕಾರರಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸದೊಂದಿಗೆ ಕಾಯಕ ತತ್ವವಾಗಿ ಪರಿಣಮಿಸಿತು. ವಚನಕಾರರು ಕಾಯಕದ ಮಹತ್ವವನ್ನು ಮನಗಂಡು ಕಾಯಕವೇ ಕೈಲಾಸವೆಂದು ನೇರವಾಗಿ ಹೇಳಿದರೆ, ಪಂಪ ಪರ್ಯಾಯವಾಗಿ ಹೇಳಿದ್ದಾನಷ್ಟೇ. ಪಂಪನ ಈ ಹೇಳಿಕೆಯು ಇಂದಿನ ನಿರುದ್ಯೋಗ ಸಮಸ್ಯೆಗೆ ಒಂದು ಸೂಕ್ತ ಪರಿಹಾರವಲ್ಲವೆ?

ಆದಿಪುರಾಣ ಧಾರ್ಮಿಕ ಕಾವ್ಯವಾದರೂ ಲೌಕಿಕ ಮತ್ತು ಪಾರಮಾರ್ಥಗಳೆರಡಕ್ಕೂ ಅನ್ವಯಿಸುವ ಸಮಾನ ಗುಣಗಳಾದ

ದಯೆ, ಧರ್ಮ, ದಾನ, ತಪಸ್ಸು, ಶೀಲಗಳು ಮನುಷ್ಯನಿಗೆ ಅವಶ್ಯವಾಗಿ ಬೇಕೆಂದು ಸರ್ವರಿಗೂ ಮಾನ್ಯವಾಗುವ ಗುಣವಿಶೇಷಗಳನ್ನು ಚಿತ್ರಿತೋರಿಸಿದ್ದಾನೆ. ಇವು ಯಾವ ಧರ್ಮದವರಿಗೂ ರುಚಿಸುವ ಗುಣಗಳಾಗಿವೆ. ಹೀಗೆ ಪಂಪನು ತನ್ನೆರಡು ಕಾವ್ಯಗಳಲ್ಲಿ ಬದುಕನ್ನು ಮುಖ್ಯವಾಗಿಟ್ಟುಕೊಂಡು ಕೃತಿರಚನೆಮಾಡಿ ಲೋಕಮಾನ್ಯನಾಗಿದ್ದಾನೆ.

೫. ಉಪಸಂಹಾರ

ಕನ್ನಡದ ಆದಿಪಕವಿ ಮಹಾಕವಿ ಎಂಬ ಪಟ್ಟಕ್ಕೆ ಹಲವು ದೃಷ್ಟಿಯಿಂದ ಅರ್ಹನಾದ ಕವಿ ಈ ಪಂಪ. ಅತನ ಎರಡು ಕೃತಿರತ್ನಗಳು ಸಾಹಿತ್ಯಪ್ರಪಂಚಕ್ಕೆ ನೀಡಿದ ಬಹುದೊಡ್ಡ ಕಾಣಿಕೆಗಳಾಗಿವೆ. ವಿಕ್ರಮಾರ್ಜುನ ವಿಜಯದಲ್ಲಿ ಲೌಕಿಕ ಭಾವವನ್ನು ವ್ಯಕ್ತಪಡಿಸಿದರೆ ಆದಿಪುರಾಣದಲ್ಲಿ ಜಿನಾಗಮದ ಶ್ರೇಷ್ಠತೆಯನ್ನು ಹೇಳಿದ್ದಾನೆ. ಮೊದಲನೆಯದರಲ್ಲಿ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಉಪ್ಪಿನ ಋಣದಿಂದ ಮುಕ್ತನಾದರೆ ಎರಡನೆಯದರಲ್ಲಿ ಜಿನಧರ್ಮದ ಶ್ರೇಷ್ಠತೆಯನ್ನು ಸಾರಿ ಧರ್ಮದ ಋಣದಿಂದ ಮುಕ್ತನಾಗಿದ್ದಾನೆ. ಪಂಪಕವಿ ಹಾಕಿದ ಲೌಕಿಕ ಆಗಮಿಕಗಳೆಂಬ ಕಾವ್ಯಪರಂಪರೆಯನ್ನು ಮುಂದಿನ ಬಹಳಷ್ಟು ಜೈನಕವಿಗಳು ಅನುಸರಿಸಿರುವುದರಿಂದ ಈತ ಯುಗಪುರುಷನೂ ಆಗಿದ್ದಾನೆ.

ರಾಘವಾಂಕ ಕವಿ 'ಜನಬಂದಕಲೆಂದು ಕಾವ್ಯ ಬರೆದೆನೆಂದು ಹೇಳಿದರೆ ಪಂಪ 'ಬೆಳಗುವೆನಿಲ್ಲಿ ಲೌಕಿಕಮುಂ ಎಂದು ಹೇಳಿದ್ದಾನೆ. ಅವನು ತನ್ನ ಲೌಕಿಕ ಕಾವ್ಯದಲ್ಲಿ ಭೋಗಜೀವನದ ಅವಶ್ಯಕತೆಯನ್ನು, ಆಗಮಿಕ ಕಾವ್ಯದಲ್ಲಿ ತ್ಯಾಗ ಜೀವನದ ಸಾರ್ಥಕತೆಯನ್ನು ಎತ್ತಿ ಒತ್ತಿ ಹೇಳಿದ್ದಾನೆ. ಪಂಪನಿಗೆ ಭೋಗ ಜೀವನದ ಬಗ್ಗೆ ತಿರಸ್ಕಾರವಿಲ್ಲ. ಆದರೆ ಅದು ಧರ್ಮಕ್ಕೆ ವಿರೋಧಿಯಾಗಿರಬಾರದು. ಭೋಗದ ರಮಣೀಯತೆಯನ್ನು ಅಸಾರವೆಂದು ಹಳಿಯಲೂ ಬಾರದು ಮತ್ತು ಅದೇ ಅಮರವೆಂದು ತಿಳಿಯಲೂ ಬಾರದು. ಬದುಕು ಭೋಗ ತ್ಯಾಗಗಳ ಸಮಬೆರಿಕೆಯ ಸಾಮರಸ್ಯದಿಂದ ಕೂಡಿದ ತುಂಬು ಜೀವನವಾಗಬೇಕೆಂಬುದು ಕವಿಯ ಅಭಿಪ್ರಾಯ. ಈ ತೆರನಾದ ತುಂಬು ಜೀವನವನ್ನು ಪಂಪ ಅನುಭವಿಸಿದವನಾಗಿದ್ದ. ಅದನ್ನೇ ತನ್ನ ಕಾವ್ಯಗಳಲ್ಲಿ ಅಭಿವ್ಯಕ್ತಪಡಿಸಿದ್ದಾನೆ.

ಪಂಪ ವಾಸ್ತವವಾದಿ. ಬದುಕಿನ ಬಗ್ಗೆ ಅಪಾರವಾದ ಪ್ರೀತಿ ವಿಶ್ವಾಸಗಳನ್ನು ಹೊಂದಿದವನಾಗಿದ್ದ. ಸಂಸಾರದಲ್ಲಿ ಸತಿ–ಪತಿಗಳ ಸಮರಸಭಾವ ನಿಡುಬಾಳಿನೊಲುಮೆಗೆ ಎಷ್ಟು ಅವಶ್ಯವೆಂಬುದನ್ನು ತನ್ನೆರಡು ಕಾವ್ಯಗಳಲ್ಲಿ ತೋರಿಸಿಕೊಟ್ಟಿದ್ದಾನೆ. 'ಪೆರರಾವುದು ಸಂಸಾರಸಾರ ಸರ್ವಸ್ವಫಲಂ' ಎಂದಿದ್ದಾನೆ.

ಸಂಸಾರವೆಂದಾಗ ಸತಿ–ಪತಿ, ಮಕ್ಕಳು–ಮೊಮ್ಮಕ್ಕಳುಗಳು ಎಂದು ಒಗ್ಗಟ್ಟಿನ ಆಗರ. ಪರಸ್ಪರರೂ ಸಮರಸಭಾವದಿಂದ ಬಂಧುರವಾದ ಬಂಧುತ್ವದಿಂದ ಹೊಂದಿಕೊಂಡು ಬಾಳುವುದು ಅವಶ್ಯ. ಹೀಗೆ ಬಾಳುವುದು ಒಂದು ವ್ಯವಸ್ಥಿತ ಕುಟುಂಬದ ಲಕ್ಷಣವೂ ಆಗುತ್ತ. ಹಿರಿಯರಾದವರು ಕಿರಿಯರ ಯೋಗಕ್ಷೇಮ

ನೋಡಿಕೊಂಡು ಹೋಗುವುದು ಅವರ ಆದ್ಯ ಕರ್ತವ್ಯವಾಗಿತ್ತು. ಒಗ್ಗಟ್ಟಿನ ಕುಟುಂಬದಲ್ಲಿ ಎಲ್ಲಿಯಾದರೂ ಒಡಕು ಕಂಡುಬಂದರೆ ಹಿರಿಯರು ಅದನ್ನು ಸಂಧಾನದ ಮೂಲಕ ಸರಿಪಡಿಸುತ್ತಿದ್ದರು. ಇದನ್ನೆಲ್ಲ ಪಂಪ ಸೂಕ್ಷ್ಮವಾಗಿ ಅರಿತವನಾಗಿದ್ದ. ತನ್ನ ಲೌಕಿಕ ಕಾವ್ಯವಾದ ವಿಕ್ರಮಾರ್ಜುನ ವಿಜಯದಲ್ಲಿ ಭೀಷ್ಮರ ಮಾತಿನ ಮೂಲಕ ಹೇಳಿಸುವ ಕೆಲ ಮಾತುಗಳಿಂದ ಪಂಪ ಕುಟುಂಬದ ಬಗ್ಗೆ ಎಷ್ಟು ಆದರ ಅಭಿಮಾನ ಹೊಂದಿದವನಾಗಿದ್ದನೆಂಬುದು ತಿಳಿದು ಬರುತ್ತದೆ. ಕುರುಪಾಂಡವರಲ್ಲಿ ಯುದ್ಧ ಅನಿವಾರ್ಯವಾದಾಗ ಭೀಷ್ಮರು ದುರ್ಯೋಧನನ ಪಕ್ಷವಹಿಸಿ ಕಾದಾಡುವ ಕಠಿ ಪ್ರಸಂಗ ಭೀಷ್ಮರ ಪಾಲಿಗೆ ಬಂದುದು ಒಂದು ದುರ್ದೈವ. ಒಂದು ಕಡೆ ಭೀಷ್ಮರೆ ನೊಂದು ನುಡಿದಿದ್ದಾರೆ. 'ರಣದೊಳ್ ಮಕ್ಕಳನಾಂ ಕೊಂದೊಡೆ ತನ್ನಿಕ್ಕಿದ ತತ್ತಿಯನೆ ಪಾಪು ನೊಣೆವಂತಕ್ಕುಂ' ಎಂದು ಈ ಮೂಲಕ ಪಂಪಕವಿ ಕೌಟುಂಬಿಕ ಸಂಬಂಧದ ಬಲವಾದ ಬಂಧನ ಎತ್ತಿ ತೋರಿಸಿ ಬದುಕಿನ ಅವಶ್ಯಕ ಮೌಲ್ಯ ಎತ್ತಿಹಿಡಿದಿದ್ದಾನೆ.

ಕೌಟುಂಬಿಕ ಜೀವನದಲ್ಲಿ ಭ್ರಾತೃತ್ವ ಭಾವವೂ ಅಷ್ಟೇ ಮುಖ್ಯವಾದುದು. ಸಂಪತ್ತು ಬರುತ್ತದೆ ಹೋಗುತ್ತದೆ. ಅದು ಮುಖ್ಯವಲ್ಲ ಸೋದರಭಾವ ಮುಖ್ಯವಾದುದು. ಈ ಪಾಳು ನೆಲದ ಆಸೆಗಾಗಿ ಅಣ್ಣ–ತಮ್ಮಂದಿರು ತಮ್ಮ ತಮ್ಮಲ್ಲಿಯೇ ಹೋರಾಡಿ ಭ್ರಾತೃತ್ವವನ್ನು ಕಡೆಗಣಿಸುವುದು ಪಂಪನಿಗೆ ಇಷ್ಟವಿಲ್ಲ. ಇದನ್ನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಮತ್ತು ಆದಿಪುರಾಣದ ಭರತ ಬಾಹುಬಲಿಯರ ಪ್ರಸಂಗದಿಂದ ಹೃದಯಂಗಮವಾಗಿ ಬಿಡಿಸಿ ತೋರಿಸಿ ಸೋದರತ್ವದ ಮೌಲ್ಯವನ್ನು ಎತ್ತಿ ಹೇಳಿದ್ದಾನೆ.

ಪಂಪ ಬದುಕಿನಲ್ಲಿ ಸ್ನೇಹಕ್ಕೆ ಪ್ರಮುಖವಾದ ಸ್ಥಾನವನ್ನು ಕೊಟ್ಟಿದ್ದಾನೆ. ಅದು ಜೀವನಕ್ಕೊಂದು ಸಂಜೀವಿನಿ. ಬದುಕಿನ ಒಂಟಿತನವನ್ನು ಹೋಗಲಾಡಿಸುವ ಒಂದು ಊರುಗೋಲು. ತನ್ನ ಮತ್ತು ಆಶ್ರಯದಾತನಾದ ಅರಿಕೇಸರಿಯೊಡನೆ ಇರುವ ಸ್ನೇಹ ಸಂಬಂಧವನ್ನು ಕರ್ಣ ಮತ್ತು ದುರ್ಯೋಧನರ ಪಾತ್ರದ ಮೂಲಕ ತೋರಿಸಿ ಕೊಟ್ಟಿದ್ದಾನೆ. ಸ್ನೇಹಕ್ಕೆ ಕುಲಜಾತಿ ಅಧಿಕಾರ ಅಂತಸ್ತುಗಳು ಅಡ್ಡಗೋಡೆಯಾಗಲಾರವು ಗುಣ ಮುಖ್ಯವೆಂದು ಹೇಳುವ ಪಂಪನ ವಿಚಾರಗಳು ಸ್ನೇಹಕುಲಕ್ಕೊಂದು ಮಾದರಿಯಾಗಿವೆ.

ಮಾನವಕುಲಕ್ಕಂಟಿದ ಮಹಾಶಾಪಗಳಲ್ಲೊಂದಾದ ಕುಲ ಜಾತಿಗಳ ಸಮಸ್ಯೆಗೆ ಪಂಪ ಬಹುಜಾಣ್ಮೆಯಿಂದ ಉತ್ತರಿಸಿದ್ದಾನೆ. ಮನುಷ್ಯ ನಿರ್ಮಿತವಾದ ಕುಲಜಾತಿಗಳು ಅವನ ನಾಶಕ್ಕೆ ಕಾರಣವಾಗುವಷ್ಟು ಬೆಳೆದು ನಿಂತಿದ್ದು ವಿಷಾದದ ಸಂಗತಿ. ಅದು ಇಂದು ನಿನ್ನೆಯದಲ್ಲ, ಎಂದಿನಿಂದಲೂ ನಡೆದು ಬಂದ ಒಂದು ಅನಿಷ್ಟ ಪರಂಪರೆ. ಅಂದು ಕುಲ ಜಾತಿಗಳ ಬಗ್ಗೆ ಪಂಪ ಸೂಚಿಸಿದ ಪರಿಹಾರ ಮಾರ್ಗಗಳು ಇಂದಿಗೂ ನಿತ್ಯನೂತನವಾಗಿವೆ. ಮಾನವತಾವಾದಿಯಾದ ಪಂಪ 'ಮನುಷ್ಯಜಾತಿ ತಾನೊಂದೆ ವಲಂ' ಎಂದು ಹೇಳಿ ವಿಶ್ವಮಾನ್ಯರ ಸಾಲಿನಲ್ಲಿ ನಿಂತಿದ್ದಾನೆ.

ಪಂಪ ಬದುಕಿನ ಮೌಲ್ಯಗಳನ್ನು ಎತ್ತಿಹಿಡಿಯುವದರೊಂದಿಗೆ ವ್ಯಕ್ತಿಗತವಾದ ಗುಣವಿಶೇಷಗಳನ್ನು ಮರೆತಿಲ್ಲ. ಒಳ್ಳೆಯ ಮನುಷ್ಯನಿಗಿರಬೇಕಾದ ಕೆಲಗುಣಗಳನ್ನು ಹೇಳುತ್ತಾನೆ. ಅವು

ಗಳಲ್ಲಿ ಗರ್ವದೋಷವೂ ಒಂದು. ಗುಣವಂತನಲ್ಲಿ ಗರ್ವವಿದ್ದ
ದರೆ ಅದು ದೊಡ್ಡ ದೋಷ. ಮನುಷ್ಯ ನಿಗರ್ವಿಯಾಗಿರಬೆ
ಅಂದಾಗ ಅವನ ವ್ಯಕ್ತಿತ್ವವಿಕಾಸಕ್ಕೆ ಹೆಚ್ಚು ಸಹಾಯಯಾಗು
ಎಂಬುದು ಕವಿಯ ಅಭಿಪ್ರಾಯ. ಗರ್ವ ದೋಷ ಎಂಬುದ
ವಿಕ್ರಮಾರ್ಜುನ ವಿಜಯದ ಪೀಠಿಕಾ ಭಾಗದಲ್ಲಿ ಮತ್ತು ಆದಿಪುರ
ದಲ್ಲಿ ಭರತ ದಿಗ್ವಿಜಯ ಕೈಕೊಂಡು ತನ್ನ ಕೀರ್ತಿಯ
ವೃಷಭಾಚಲದಲ್ಲಿ ಕೆತ್ತುವ ಪ್ರಸಂಗದಲ್ಲಿ ಸ್ಪಷ್ಟ ಪಡಿಸಿದ್ದಾನೆ.

ಮನುಷ್ಯನು ಶ್ರಮಜೀವಿಯಾಗಬೇಕು, ಕಷ್ಟದಿಂದ ಸ
ದನೆ ಮಾಡಬೇಕು, ಉದ್ಯೋಗಶೀಲನಾದವನಿಗೆ ಯಾವ ಸ
ಸ್ಯೆಯೂ ಬಾರದು ಎಂದು ಹೇಳುವ ಮಾತುಗಳು ಇಂದಿಗೂ
ಯಿಸುವ ನಿತ್ಯ ಸತ್ಯಗಳಾಗಿ ಪರಿಣಮಿಸಿವೆ. ಈ ಜಗತ್ತಿನಲ್ಲಿ ಹ
ಬಂದ ಪ್ರತಿಯೊಬ್ಬನೂ ಅನ್ನದ ಋಣಕ್ಕೆ ಮೀರಿ ಬಾಳಬಾರ
ಎಂದು ಜೋಳದಪಾಳಿಗಳಂತಹ ಉದಾರಹರಣೆಯಿಂದ ಸ್
ಪಡಿಸಿದ್ದಾನೆ. ಪಂಪ ಹೇಳಿದ ಇಂತಹ ಎಷ್ಟೋ ಮಾತು
ಆತ ವಾಸ್ತವವಾದಿ ಎಂಬುದನ್ನು ಸ್ಪಷ್ಟ ಪಡಿಸುತ್ತವೆ. ಪ
ಸೂಚಿಸಿದ ಪರಿಹಾರ ಮಾರ್ಗಗಳನ್ನು ಇಂದು ನಾವು ತ
ಪಾಲಿಸಿದರೆ ನಮ್ಮ ಬಹುಪಾಲು ಸಮಸ್ಯೆಗಳು ಸುಲಭ
ಪರಿಹಾರವಾಗುತ್ತವೆ

ಉಪನ್ಯಾಸ ಗ್ರಂಥಮಾಲೆಯ ಕೆಲವು ಪ್ರಕಟನೆಗಳು

೧ ಕುಮಾರವ್ಯಾಸನ ಕೃಷ್ಣ

—ಎನ್ಕೆ

೨ ಪಂಪ ಕವಿ ಚಿತ್ರಿಸಿದ ಭೀಷ್ಮರು

—ಬಿ. ಸಿ. ಜವಳಿ

೩ ಪಂಚ ತಂತ್ರದ ಕಥೆಗಳು

—ವರದರಾಜ ಹುಯಿಲಗೋಳ

೪ ಹರಿಶ್ಚಂದ್ರ ಕಾವ್ಯದಲ್ಲಿಯ ರಸಸ್ಥಾನಗಳು

—ಸಿ. ಆರ್. ಹೆರಕಲ್

೫ ಕವಿ ಬ್ರಹ್ಮಶಿವ

—ಎಸ್. ಪಿ. ಪಾಟೀಲ

೬ ಪಾಣಿನಿ

—ಕೆ. ಕೃಷ್ಣಮೂರ್ತಿ

೭ ಕುಮಾರವ್ಯಾಸನ ಭಾಗವತ ದೃಷ್ಟಿ

—ಎ. ಆರ್. ಬುರ್ಲಿ

೮ ಧರ್ಮ-ಸಂಸ್ಕೃತಿ-ಸಮಾಜ

—ಎನ್. ಕೆ. ಕಡೆತೋಟದ

೯ ಶ್ರೀ ಅರವಿಂದರ ಮಹಾಕಾವ್ಯ 'ಸಾವಿತ್ರಿ'

—ಪಿ. ಬಿ. ನರೇಗಲ್ಲ

೧೦ ಭರ್ತೃಹರಿಯ ನೀತಿಶತಕ

—ಡಿ. ಎನ್. ಶಾನಭೋಗ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ